

# ಸಿಹಿ ಕಹಿ

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ
Editor : MARUTI BASAVANTAPPA HOSAMANI
Cell : +91 9741319119

ಕನ್ನಡ ದಿನಪತ್ರಿಕೆ, ಬಾಗಲಕೋಟೆ
ಬಾಗಲಕೋಟೆಯಿಂದ ಪ್ರಕಟಿತ
RNI REG No. : KARKAN/2016/75068

SIHI KAHI
KANNADA DAILY MORNING
BAGALKOT

Volume : 07 Issue : 225 Friday 16-05-2025 E-mail : maruti.b.hosamani76@gmail.com Page: 4 Price : Rs. 1/-


## ಗ್ರಾಮೀಣ ಭಾಗದ ಸಂಸ್ಕೃತಿ, ಸಂಸ್ಕಾರ, ಸಂಪ್ರದಾಯಗಳನ್ನು ಮುಂದಿನ ಪೀಳಿಗೆಗೆ ಪರಿಚಯಿಸಿದ ಸರ್ಕಾರಿ ಪದವಿ ಮಹಾವಿದ್ಯಾಲಯ

**ಸಿಹಿ ಕಹಿ ಸುದ್ದಿ,**

**ನರೇಗಲ್ :** ಕಾಲೇಜಿನ ಆವರಣದಲ್ಲಿ ತಳಿರು ತೋರಣ, ಅಡಕೆ ಹೊಂಬಾಳೆಯಲ್ಲಿ ಸಿಂಗರಿಸಿದ ಕಳಸ, ಎತ್ತು, ಬಂಡಿ, ಕೂರುಗಿ, ನಗಾ, ಒಣಕೆ, ವಿವಿಧ ಧಾನ್ಯಗಳ ರಾಶಿ, ಸೇರು, ಬೆಲ್ಲ, ವಿವಿಧ ಪೂಜಾ ಸಾಮಗ್ರಿಗಳು ಒಂದೆಡೆ ಯಾದರೆ, ಸೀರೆ–ಯುಟ್ಟ ನೀರೆಯರ ವಯ್ಯಾರ. ಗತಕಾಲದ ವೈಭವಕ್ಕೆ ಮರಳಿದಂತೆ ಭಾಸವಾಗುವ ದೃಶ್ಯ ಇನ್ನೊಂದೆಡೆ ಸೆಳೆಯುತಿತ್ತು.

ಹೊರಗಿನಿಂದ ನೋಡುವವರಿಗೆ ಪಕ್ಕಾ ಮದುವೆ ಮನೆಯಂತೆ ಕಾಣುತಿತ್ತು. ಆದರೆ ಇದು ನರೇಗಲ್ ಪಟ್ಟಣ ಮರಿಯಪ್ಪ ಬಾಳಪ್ಪ ಕಳಕೊಣ್ಣವರ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಬುಧವಾರ ನಡೆದ ಜಾನಪದ ಉತ್ಸವ ಕಾರ್ಯಕ್ರಮ ಎನ್ನುವುದು ವಿಶೇಷವಾಗಿತ್ತು. ಈ ಮೂಲಕ ಗ್ರಾಮೀಣ ಭಾಗದ ಸಂಸ್ಕೃತಿ, ಸಂಸ್ಕಾರ, ಸಂಪ್ರದಾಯಗಳನ್ನು ಮುಂದಿನ ಪೀಳಿಗೆಗೆ ಪರಿಚಯಿಸುವ, ಗ್ರಾಮೀಣ ಸೊಗಡನ್ನು ಹಚ್ಚ ಹಸಿರಾಗಿಡುವ ಪ್ರಯತ್ನವನ್ನು ಕಾಲೇಜಿನ ಪ್ರಾಧ್ಯಾಪಕರು, ವಿದ್ಯಾರ್ಥಿಗಳು ಮಾಡಿದರು. ಇವರ ಸಂಭ್ರಮ ನೋಡಲು ಮಜರೆ ಹಳ್ಳಿ ಗ್ರಾಮಸ್ಥರು,



ಪಾಲಕರು, ಸ್ಥಳೀಯರ ಬಂದಿದ್ದು ವಿಶೇಷವಾಗಿತ್ತು.

ಸಮೀಪದ ಕೋಡಿಕೊಪ್ಪ ಗ್ರಾಮದ ಸರ್ಕಾರಿ ಶಾಲೆಯ ಎದುರಿನಿಂದ ಆರಂಭವಾದ ಪದವಿ ಕಾಲೇಜಿನ ಜಾನಪದ ಉತ್ಸವದ ವೇಳೆ ಎತ್ತಿನ ಬಂಡಿಯಲ್ಲಿ ಪ್ರಾಧ್ಯಾಪಕರು ಬಂದರೆ, ಅದರ ಮುಂದೆ ದೇಶಿ ಉಡುಪಿನಲ್ಲಿ ಕುಂಭಹೊತ್ತ ವಿದ್ಯಾರ್ಥಿನಿಯರು ಗ್ರಾಮದ ಪ್ರಮುಖ ಬೀದಿಯಲ್ಲಿ ಜಾನಪದ ಹಾಡುಗಳನ್ನು ಹಾಡುತ್ತ ಸಾಗಿದರು. ಇದನ್ನು ನೋಡಲು ಮಹಿಳೆಯರು, ನಿವಾಸಿಗಳು ಮನೆಯಿಂದ ಹೊರಗೆ ಬಂದು ಫೋಟೆ ಸೆರೆ ಹಿಡಿಯುತ್ತಿದ್ದರು. ಕಾಲೇಜಿಗೆ ತಲುಪಿದ ನಂತರ ಪೂಜೆ ಮಾಡಿ, ಆರತಿ ಬೆಳಗೆ ಸ್ವಾಗತ ಕೋರಲಾಯಿತು. ಈ ವೇಳೆ ಉಪನ್ಯಾಸ ನೀಡಿದ ಗದಗ ಎಎಸ್ಎಸ್ ಕಾಲೇಜಿನ ಪ್ರಾಧ್ಯಾಪಕ ಬಾಹುಬಲಿ ಜೈನರ, ಹಳ್ಳಿಗರ ಮಕ್ಕಳೇ ಹೆಚ್ಚಿನ ಸಂಖ್ಯೆಯಲ್ಲಿ ಪ್ರವೇಶ ಪಡೆದ ಈ ಮಹಾವಿದ್ಯಾಲಯವು ಗ್ರಾಮೀಣ ಸೊಗಡಿನಿಂದ ಕಂಗೊಳಿಸಿದೆ. ಪ್ರತಿ ವಿದ್ಯಾರ್ಥಿಯು ತನ್ನ ಮನೆಯ ಕಲೆ, ಸಂಸ್ಕೃತಿ, ಉಡುಪು ಪ್ರದರ್ಶಿಸಲು ವೇದಿಕೆ ಮಾಡಿ ಕೊಟ್ಟಿದೆ. ಆ ಇದು ಕೇವಲ ಒಂದು ದಿನಕ್ಕೆ ಸೀಮಿತವಾಗ ಬಾರದು ಎಂದರು. ಆದರೆ ಅವನನ್ನು ಪ್ರಾಧ್ಯಾಪಕ ಬಾಹುಬಲಿ ಜೈನರ, ಹಳ್ಳಿಗರ ಮಕ್ಕಳೇ ಹೆಚ್ಚಿನ ಸಂಖ್ಯೆಯಲ್ಲಿ ಪ್ರವೇಶ ಪಡೆದ ಈ ಮಹಾವಿದ್ಯಾಲಯವು ಗ್ರಾಮೀಣ ಸೊಗಡಿನಿಂದ ಕಂಗೊಳಿಸಿದೆ. ರೈತ ಭೂಮಿಯನ್ನು ನಂಬಿ ಬೀಜ ಬಿತ್ತುತ್ತಾನೆ,ಆದರೆಅವನನ್ನುಪ್ರಕೃತಿ ಕೈಬಿಡುವುದಿಲ್ಲ.ಫಲಬರುವವರಗೆ ತಾಳ್ಮೆಯಿಂದ ಕಾಯುತ್ತಾನೆ. ಹಾಗೆ ವಿದ್ಯಾರ್ಥಿಗಳು ಶಿಕ್ಷಕರನ್ನು ನಂಬಿ ಕಲಿಯಬೇಕು, ಅವರನ್ನು ಗೌರವಿಸಬೇಕು, ತಾಳ್ಮೆಯಿಂದ ಗುರುಗಳು ಹೇಳಿದ ಮಾತನ್ನು ಪಾಲಿಸಬೇಕು ಆಗ ಫಲ ಸಿಗುತ್ತದೆ ಎಂದರು. ಕೋಟಿ ರೂಪಾಯಿ ಕೊಟ್ಟರ ಸಿಗದ ಸಾಹಿತ್ಯ ಜಾನಪದದಲ್ಲಿದೆ, ಇದರಲ್ಲಿ ಹೆತ್ತವರನ್ನುಹೇಗೆಗೌರವಿಸಬೇಕು, ಅತಿಥಿ ಸತ್ಕಾರ ಹೇಗೆ ಇರಬೇಕು ಎನ್ನುವ ಮಾರ್ಗದರ್ಶನವಿದೆ ಅದನ್ನು ನಿಜ ಜೀವನದಲ್ಲಿ ಅಳವಡಿಸಿ ಕೊಳ್ಳಬೇಕು ಎಂದರು. ಪ್ರಾಂಶುಪಾಲ ಎಸ್.ಎಲ್ ಗುಳೇದಗುಡ್ಡ ಮಾತನಾಡಿ, ಜನರ ನಡುವೆ ಬದುಕುವ ಕಲೆಯನ್ನು ಕಲಿಸಿ ಕೊಡುವ ಶಿಕ್ಷಣವೇ ಜಾನಪದ ಸಂಸ್ಕೃತಿಯಾಗಿದೆ. ಜಾನಪದಕ್ಕೆ ಜಾತಿ, ಮತ, ಪಂತ, ಧರ್ಮದ ಬೇಧವಿಲ್ಲ. ಎಲ್ಲರೂ ಒಂದೇ ತಾಯಿಯ ಮಕ್ಕಳು ಎನ್ನುವ ನೀತಿಯನ್ನು ತಿಳಿಸುತ್ತದೆ ಎಂದರು. ಮಕ್ಕಳ ಜೊತೆಯಲ್ಲಿ ಮಕ್ಕಳಾಗಿ, ವಿದ್ಯಾರ್ಥಿಗಳನ್ನು ವಿಶ್ವಾಸಕ್ಕೆ ಪಡೆದು ಕಾರ್ಯಕ್ರಮವನ್ನು ಅದ್ದೂ–ರಿಯಾಗಿ ಯಶಸ್ವಿ ಗೊಳಿಸಿದ್ದಾರೆ.

ವೇದಿಕೆ ಕಾರ್ಯಕ್ರಮದ ನಂತರ ಹಳ್ಳಿ ಸೊಗಡಿನ ಸ್ಪರ್ಧೆಗಳು, ಜಾನಪದ ವಿಭಾಗದ ಸ್ಪರ್ಧೆಗಳು ನಡೆದವು. ಈ ವೇಳೆ ಶಿವಮೂರ್ತಿ ಕುರೇರ, ಎಸ್.ಎಸ್ ಸೂಡಿ, ಸುನಂದಾ ಮುಂಜಿ, ಜಯಶ್ರೀ ಮುತಗಾರ, ಅಂಜನಮೂರ್ತಿ ಕೆ. ಎಚ್, ಅನೀಲಕುಮಾರ, ಶಶಿಕಲಾ ವಿ. ಎಸ್, ಕೆ. ಆರ್. ಪಾಟೀಲ, ನಸರೀನಾಬಾನು ಜಮಾದಾರ, ವಿರೂಪಾಕ್ಷ, ಶಿವಪ್ಪ ಕುರುಬರ, ಅಯ್ಯಪ್ಪ, ಎಂ. ಎಫ್. ತಹಶೀಲ್ದಾರ, ವಿ. ಸಿ. ಇಲ್ಲೂರ, ವಿ. ಕೆ. ಸಂಗನಾಳ, ಕೆ. ಎನ್. ಕಟ್ಟಿಮನಿ, ಕಿರಣ ರಂಜಣಗಿ, ಎನ್. ಎಸ್. ಹೊನ್ನೂರ, ಚಂದ್ರು ಸಂಶಿ, ಬಸವರಾಜ ಎಸ್. ಮಡಿವಾಳರ, ಬಿ. ಕೆ. ಕಂಬಳಿ, ಶಶಿಕಲಾ ಕಿನ್ನಾಳ, ವಿನಯಶ್ರೀ ಪರಯ್ಯನಮಠ,ಪ್ರೇಮಾ ಕಾತ್ರಾಳ, ಶ್ವೇತಾ ಹುಣಸಿಮರದ, ಶಂಕರ ನರಗುಂದ, ಸಿದ್ದು ನವಲಗುಂದ, ಮಲ್ಲಪ್ಪ ಸಮಗಂಡಿ ಇದ್ದರು.


**ಜಿಲ್ಲಾ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್:ಎಸ್.ವಿ ಸಂಕನಗೌಡ್ರ.ರೋಣ.ಗದಗ**

## ಮೊಬೈಲ್ ಬಿಟ್ಟು ಪುಸ್ತಕ ಹಿಡಿಯುವ ಅಗತ್ಯವಿದೆ: ಶರಣ ತತ್ವ ಚಿಂತಕಿ ಡಿ.ಶಬ್ರಿನಾ ಮಹಮ್ಮದ್ ಅಲಿ ಅಭಿಪ್ರಾಯ

**ಸಿಹಿ ಕಹಿ ಸುದ್ದಿ,**

**ಚಳ್ಳಕೆರೆ :** ಇಂದಿನ ಮಕ್ಕಳು ಮತ್ತು ಯುವ ಜನಾಂಗ ಮೊಬೈಲ್ ಬಿಟ್ಟು ಪುಸ್ತಕ ಹಿಡಿಯುವ ಅಗತ್ಯವಿದೆ ಎಂದು ಚಳ್ಳಕೆರೆ ನಗರದ ಶರಣ ತತ್ವ ಚಿಂತಕಿ ಡಿ.ಶಬ್ರಿನಾ ಮಹಮ್ಮದ್ ಅಲಿ ಅಭಿಪ್ರಾಯ ಪಟ್ಟರು. ನಗರದ ತಮ್ಮ ಕನ್ನಡ ಕೌಸ್ತುಭ ಮನೆಯಲ್ಲಿರುವ ಡಾ, ಬಿ.ಆರ್ ಅಂಬೇಡ್ಕರ್ ಗ್ರಂಥಾಲಯಕ್ಕೆ ಚಳ್ಳಕೆರೆಯ ಶ್ರೀಶಾರದಾಶ್ರಮದ ಸದ್ಭಕ್ತರಾದಯತೀಶ್.ಎಂಸಿದ್ದಾಪುರ ಅವರು ನೀಡಿದ ನೂರಕ್ಕೂ ಹೆಚ್ಚು ಸದ್ಗ್ರಂಥಗಳನ್ನು ಕೊಡುಗೆಯಾಗಿ ಸ್ವೀಕರಿಸಿ ಅವರು ಮಾತನಾಡಿದರು.





ಗ್ರಂಥಾಲಯದ ಪುಸ್ತಕಗಳ ಓದಿನಿಂದ ಒಳ್ಳೆಯ ಜ್ಞಾನ ದೊರೆಯುವುದಲ್ಲದೆ ಉತ್ತಮ ಜೀವನದ ನಿರ್ಮಾಣಕ್ಕೆ ನೆರವಾಗುತ್ತದೆ. ಅಲ್ಲದೆ ಸ್ಪರ್ಧಾತ್ಮಕ ಪುಸ್ತಕಗಳ ಅಧ್ಯಯನದಿಂದ ವಿವಿಧ ಪರೀಕ್ಷೆಗಳನ್ನು ಸುಲಭವಾಗಿ ಎದುರಿಸಿ ಉದ್ಯೋಗ ಪಡೆಯಲು ಸಹಾಯ ಮಾಡುತ್ತದೆ. ಆದ್ದರಿಂದ ಓದುಗರು ಈ ಗ್ರಂಥಾಲಯದ ಸದುಪಯೋಗ ಪಡೆದು ಕೊಳ್ಳುವಂತೆ ಹಾಗೂ ಪುಸ್ತಕಗಳನ್ನು ದಾನವಾಗಿ ಕೊಡುಗೆಯಾಗಿ ನೀಡುವಂತೆ ಕರೆ ನೀಡಿದರು. ಈ ನಿಟ್ಟಿನಲ್ಲಿ ಚಿಕ್ಕ ವಯಸ್ಸಿನಲ್ಲಿಯೇ ಆಧ್ಯಾತ್ಮಿಕ ಮಾರ್ಗದಲ್ಲಿ ಸಾಗುತ್ತಿರುವ ಸಮಾಜ ಸೇವಕ ಯತೀಶ್.ಎಂ ಸಿದ್ದಾಪುರ ಅವರ ಸಮಾಜ ಮುಖಿ ಚಿಂತನೆಗಳು ಮತ್ತು ಕಾರ್ಯಗಳು ಇಂದಿನ ಯುವ ಜನಾಂಗಕ್ಕೆ ಆದರ್ಶವಾಗ ಬೇಕಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ಸಮಾಜ ಸೇವಕ ಯತೀಶ್.ಎಂ ಸಿದ್ದಾಪುರ ಮಾತನಾಡಿ ನೂರಕ್ಕೂ ಹೆಚ್ಚು ವಿವಿಧ ಭಾಷೆಯ ಸದ್ಗ್ರಂಥಗಳನ್ನು ಗ್ರಂಥಾಲಯಕ್ಕೆ ಕೊಡುಗೆ–ಯಾಗಿ ನೀಡುತ್ತಿರುವುದು ಸಂತಸ ತಂದಿದ್ದು ಓದುಗ–'ರು ಇದರ ಸದುಪಯೋಗ ಪಡೆದು ಕೊಳ್ಳಬೇಕು. ಹಾಗೇ ಪ್ರತಿಯೊಂದು ಮನೆಯಲ್ಲಿಯೂ ಈ ತರಹದ ಗ್ರಂಥಾಲಯಗಳ ನಿರ್ಮಾಣದ ಅವಶ್ಯಕತೆಯಿದೆ ಎಂದುಪ್ರತಿಪಾದಿಸಿದರು.ಈಸಂದರ್ಭದಲ್ಲಿಯತೀಶ್. ಎಂ ಸಿದ್ದಾಪುರ ಅವರನ್ನು ಡಿ.ಶಬ್ರಿನಾ ಮಹಮ್ಮದ್ ಅಲಿ ದಂಪತಿಗಳು ಮತ್ತು ಮಕ್ಕಳು ಸನ್ಮಾನಿಸಿದರು. ಈ ಕಾರ್ಯಕ್ರಮದಲ್ಲಿ ಕವಿ ಎಂ.ಓ ಮಹಮ್ಮದ್ ಅಲಿ, ಓದುಗ ಪುಟಾಣಿಗಳಾದ ಇನ್ಶಾ ಎಂ.ಎಸ್, ಶಿಫಾ ವಿಹಾನ್ ಅಲಿ ಎಂ.ಎಸ್ ಉಪಸ್ಥಿತರಿದ್ದರು.

**ವರದಿ:ಯತೀಶ್.ಎಂ ಸಿದ್ದಾಪುರ,ಚಳ್ಳಕೆರೆ**

## ಮಾರುತೇಶ್ವರನಿಗೆ ವಿಶೇಷ ಪೂಜಾಲಂಕಾರ




**ಬನಹಟ್ಟಿ :** ಪಹಲ್ಗಾಮ್ ಘಟನೆಗೆ ಪ್ರತಿಕಾರವಾಗಿ ಆಪರೇಷನ್ ಸಿಂಧೂರ ಮೂಲಕ ಪಾಕಿಸ್ತಾನಕ್ಕೆ ಬುದ್ಧಿ ಕಲಿಸುವ ಕೆಲಸ ಭಾರತದ ಸೈನಿಕರು ಮಾಡಿದ್ದಾರೆ ಎಂದು ಕಾಂಗ್ರೆಸ್ ಮುಖಂಡ ಮಹೇಶ ಚಿಂಚಖಂಡಿ ಹೇಳಿದರು.

ಅವರು ತಾಲೂಕಿನ ನಾವಲಗಿ ಗ್ರಾಮದ ಉದ್ಭವ ಮೂರ್ತಿ ಮಾರುತೇಶ್ವರನಿಗೆ ಕಾಂಗ್ರೆಸ್ ಮುಖಂಡ ಸಿದ್ದು ಕೊಣ್ಣೂರ ನೇತೃತ್ವದಲ್ಲಿ ಮತ ಕ್ಷೇತ್ರದಾದ್ಯಂತ ದೇವಸ್ಥಾನಗಳಲ್ಲಿ ಭಾರತೀಯ ಸೈನಿಕರಿಗೆ ಆರೋಗ್ಯ ಹಾಗೂ ಜಯಶಾಲಿಯಾಗುವಂತೆ ಶಕ್ತಿ ನೀಡಲಿ ಎಂದು ಪೂಜೆ ಸಲ್ಲಿಸಲಾಯಿತು.

ಈಸಂದರ್ಭದಲ್ಲಿಉದ್ಭವಮೂರ್ತಿಮಾರುತೇಶ್ವರನಿಗೆ ವಿಶೇಷ ಪೂಜೆ ಸಲ್ಲಿಸಿ ಮಾತನಾಡಿ ನಮ್ಮ ಭಾರತೀಯ ಸೈನಿಕರಿಗೆ ಅಭಿನಂದನೆ ಸಲ್ಲಿಸಬೇಕಾಗಿದೆ. ನಾವೆಲ್ಲರೂ ಭಾರತದ ಸೈನಿಕರ ಜೊತೆಗಿದ್ದೇವೆ ಎಂಬ ಸಂದೇಶ ನೀಡಲು ಸೈನಿಕರಿಗೆ ದೇವರು ಆತ್ಮಸ್ಥೈರ್ಯ ಹಾಗೂ ಆರೋಗ್ಯ ನೀಡಲಿ ಎಂದು ಭಗವಂತನಲ್ಲಿ ನಾವೆಲ್ಲರೂ ಪ್ರಾಥಿ9ಸೋಣವೆಂದರು.

ಈ ಸಂದರ್ಭದಲ್ಲಿ ಮುಖಂಡರಾದ ಕಾಶಪ್ಪ ನಾಯಕ, ಹಣಮಂತ ಬರಗಾಲ, ವಿಶ್ವನಾಥ ಬಡಚಿ, ಬಸವರಾಜ ದ್ಯಾವಣ್ಣವರ, ಮಂಜು ಕಾಂತಿ, ಗಿರೀಶ ಕಾಂತಿ, ಶಿವಪ್ಪ ವಾಲಿ, ಜಗದೀಶ ಪಾಟೀಲ, ನಿಂಗಪ್ಪ ಕಾಂತಿ, ರವಿ ಬೆಳಗಲಿ, ಮಹಾಂತೇಶ ಮನ್ನಿ ಸೇರಿದಂತೆ ಇನ್ನೂ ಅನೇಕರು ಉಪಸ್ಥಿತರಿದ್ದರು.

## ಯುದ್ಧ ಯಶಸ್ವಿಗಾಗಿ ಮಹಾಲಿಂಗೇಶ್ವರ ದೇವಸ್ಥಾನದಲ್ಲಿ ಪೂಜೆ

**ಮಹಾಲಿಂಗಪುರ :** ಭಾರತ ಮತ್ತು ಪಾಕಿಸ್ತಾನ ನಡುವೆ ನಡೆದಿರುವ ಯುದ್ಧದಲ್ಲಿ ನಮ್ಮ ಸೈನಿಕರಿಗೆ ಅಗಾಧ ಶಕ್ತಿ ಮತ್ತು ಭಾರತ ದೇಶಕ್ಕೆ ಯಶಸ್ಸು ಸಿಗಲಿ ಎಂದು ಬಿಜೆಪಿ ಮುಖಂಡರು ಪಟ್ಟಣದ ರೇವಡಿಗಿಡದ ಮಹಾಲಿಂಗೇಶ್ವರ ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸಿ ಪ್ರಾರ್ಥಿಸಿದರು. ಬಿಜೆಪಿ ನಗರ ಘಟಕ ಅಧ್ಯಕ್ಷ ಶಂಕರ ಪಾಟೀಲ ಸೇರಿದಂತೆ ಪುರಸಭೆ ಸದಸ್ಯರು, ಬಿಜೆಪಿಮುಖಂಡರು,ಕಾರ್ಯಕರ್ತರುಹಾಜರಿದ್ದರು.

## ದೇಶದ ಯೋಧರ ಜಯಕ್ಕಾಗಿ ವಿಶೇಷ ಪೂಜೆ



**ತೇರದಾಳ :** ಭಾರತ ಹಾಗೂ ಪಾಕಿಸ್ತಾನ ನಡುವೆ ನಡೆಯುತ್ತಿರುವ ಯುದ್ಧದಲ್ಲಿ ದೇಶದ ಒಳಿತಿಗಾಗಿ ಹಾಗೂ ಯೋಧರ ಜಯಕ್ಕಾಗಿ ಇಲ್ಲಿನ ಯಲ್ಲಮ್ಮದೇವಿ ದೇವಸ್ಥಾನದಲ್ಲಿ ಶುಕ್ರವಾರ ರಾಜಕೀಯ ಮುಖಂಡರು ವಿಶೇಷ ಪೂಜೆ ಸಲ್ಲಿಸಿದರು.

ಪೂಜೆ ಬಳಿಕ ಮಾತನಾಡಿದ ಹಿರಿಯರಾದ ಸುರೇಶ ರೇಣಕೆ, ಬಾಳು ದೇಶಪಾಂಡೆ, ನೇಮಣ್ಣ ಸಾವಂತನವರ, ಪೆಹಲ್ಗಾಮದಲ್ಲಿ ಮುಗ್ಧ ಹಿಂದೂ ಧಮ9ದ ಪ್ರವಾಸಿಗರನ್ನು ಹತ್ಯೆ ಮಾಡುವ ಮೂಲಕ ಭಾರತ ದೇಶದ ತಾಳ್ಮೆಯನ್ನು ಪರೀಕ್ಷೆ ಮಾಡುವ ದುಸ್ಸಾಹಸ ಪಾಕಿಸ್ತಾನ ಮಾಡಿದೆ. ಭಾರತ ಕೂಡ ಇಂಥ ಧರ್ಮಾಂಧರರನ್ನು ಕೊನೆಗಾಣಿಸುವುದರಲ್ಲಿ ತಾನೇನು ಕಡಿಮೆ ಇಲ್ಲ ಎಂಬುದಕ್ಕೆ ನಮ್ಮ ಸೇನೆ ಪಾಕಿಸ್ತಾನದ ಮೇಲೆ ಸಿಂಧೂರ ಆಪರೇಶನ್ ಮೂಲಕ ಈಗಾಗಲೇ ತೋರಿಸಿದೆ.

ಇಂತಹ ಸಂದರ್ಭದಲ್ಲಿ ನಾವು ಭಾರತೀಯರು ಒಗ್ಗಟ್ಟಿನಿಂದ ಹೋರಾಟ ನಡೆಸಬೇಕು. ಗಡಿಯಲ್ಲಿ ದೇಶದ ಸಂರಕ್ಷಣೆ ಮಾಡುತ್ತಿರುವ ಯೋಧರಿಗೆ ಹಾಗೂ ಅವರ ಕುಟುಂಬಸ್ಥರಿಗೆ ಬೆಂಬಲವಾಗಿ ನಿಲ್ಲಬೇಕೆಂದು ಕರೆ ನೀಡಿದರು. ಮಹಾವೀರ ಕೊಟಕನೂರ,

ವಿಠ್ಠಲತಟ್ರಿ,ಶಂಕರಕುಂಬಾರ,ಭೀಮಗೊಂಡಸದಲಗಿ,ಅಪ್ಪುಮಂಗಸೂಳಿ, ನಿಂಗಪ್ಪ ನೀಲಜಗಿ, ಕೇದಾರಿ ಪಾಟೀಲ, ಅಲ್ಲಪ್ಪ ಬಾಬಗೊಂಡ, ಸದಾಶಿವ ಹೊಸಮನಿ, ಸಾಗರ ಸಾವಂತನವರ, ಕಾಶಿನಾಥ ರಾಠೋಡ, ಸಚಿನ ಕೊಡತೆ ಪಾಲ್ಗೊಂಡಿದ್ದರು.


## ಬನಹಟ್ಟಿ ಸರಕಾರಿ ಪ್ರೌಢ ಶಾಲೆಯ ಉತ್ತಮ ಸಾಧನೆ

**ಬನಹಟ್ಟಿ :** ಇಲ್ಲಿಯ ಸರಕಾರಿ ಪದವಿ ಪೂರ್ವ ಕಾಲೇಜಿನ ಪ್ರೌಢಶಾಲೆ ವಿಭಾಗದ ವಿದ್ಯಾರ್ಥಿಗಳು 2024–25 ನೇ ಸಾಲಿನ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಉತ್ತಮ ಸಾಧನೆ ಮಾಡಿದ್ದಾರೆ ಎಂದು ಉಪ ಪ್ರಾಂಶುಪಾಲ ಪ್ರಕಾಶ ದಾಸರ ತಿಳಿಸಿದರು.

ಬಸವರಾಜ ಸಿಂಹಾಸನ 591 (94.56%) ಅಂಕ ಪಡೆದು ಪ್ರಥಮ, ಸಂಜನಾ ಮುಂಜಿ 590 (94.40%) ಅಂಕ ಪಡೆದು ದ್ವಿತೀಯ, ತನುಶ್ರೀ ಪಿಸೆನ್ನವರ (94.08%) ಅಂಕ ಪಡೆದು ತೃತೀಯ ಸ್ಥಾನ ಪಡೆದು ಕೊಂಡಿದ್ದಾಳೆ. ಅದೇ ರೀತಿ ನಂದಿನಿ ಸಣಕಲ 583 (93.28%), ಪಲ್ಲವಿ ಜಗದಾಳ 567 (90.72%) ಅಂಕ ಪಡೆದು ಸಾಧನೆ ಮಾಡಿದ್ದಾಳೆ. ಇವರ ಸಾಧನೆಗೆ ಮುಖ್ಯ ಗುರುಗಳು, ಎಸ್.ಡಿ.ಎಂ.ಸಿ. ಅಧ್ಯಕ್ಷರು, ಸದಸ್ಯರು, ಶಿಕ್ಷಕರು ಸಂತಸ ವ್ಯಕ್ತಪಡಿಸಿದ್ದಾರೆ.

## ಬಾಳಿನಲಿ ತಾಳ್ಮೆಗೆ ಅಗ್ರಸ್ಥಾನ

ಸಂಬಂಧಗಳು ದೂರ ಇದ್ದಷ್ಟು ಗೌರವ
ಮಾತುಗಾರರ ಹತ್ತಿರ ಮೌನವೇ ಬಂಗಾರ
ಪ್ರೀತಿ ಕಡಿಮೆ ಇದ್ದಷ್ಟು ನೆಮ್ಮದಿ
ಆಸೆಗಳು ಕಡಿಮೆ ಇದ್ದಷ್ಟು ಮನಃಶಾಂತಿ
ಮಾತು ಕಡಿಮೆ ಇದ್ದಷ್ಟು ಚಿನ್ನದಷ್ಟು ಬೆಲೆ
ಉತ್ತಮ ಕಾರ್ಯ ಹೇಳದೇ ಮಾಡು
ಹಾನಿಯಾಗುವ ಮನನೋಯಸದಿರುವ
ಕಾಯ ಮಾಡದಿರುವುದೇ ಒಳಿತು
ಕಿಡಕಿಗಳು ಮನೆಗಳಿಗೆ ಗಾಳಿ ಬೆಳಕು
ಪುಸ್ತಕಗಳು ಮೆದಳಿಗೆ ಜ್ಞಾನದ ಕಿರಣ
ಆಧ್ಯಾತ್ಮಿಕ ನುಡಿ ಮನಕೆ ಆನಂದವು
ಶ್ರಮದಾಯಕಕಾಯಕದೇಹಕೆಉತ್ತಮವು



**– ಶ್ರೀದೇಶಂಸು**
**ಶ್ರೀ ಸುರೇಶ ಶಂಕ್ರೆಪ್ಪ ಅಂಗಡಿ**
**ದೇವರ ಹಿಪ್ಪರಗಿ**

## ರಾಮಪುರದ ಜ್ಞಾನೋದಯ ಪ್ರೌಢಶಾಲೆ ಮಕ್ಕಳ ಸಾಧನೆ



1 ಅಮೃತಾ ವಿ. ಕರಿಜಾಡರ 603/625 (96.48%)



2 ಸ್ವಂದನಾ ಬ. ಚುನಮರಿ 597/625 (95.52%)



3 ಚಂದನಶ್ರೀ ಬ. ಬುಜರುಕ 585/625 (93.60%)

**ರಬಕವಿ :** ಎಸ್ಸೆಸ್ಸೆಲ್ಸಿ ವಾರ್ಷಿಕ ಪರೀಕ್ಷೆಯಲ್ಲಿ ಸಮೀಪದ ರಾಮಪುರದ ಜ್ಞಾನೋದಯ ಕನ್ನಡ ಮಾಧ್ಯಮ ಅನುದಾನಿತ ಪ್ರೌಢಶಾಲೆಯ ಅಮೃತಾ ವಿ. ಕರಿಜಾಡರ 603 (ಶೇ.96.48) ಅಂಕ ಪಡೆಯುವ ಮೂಲಕ ಪ್ರಥಮ ಸ್ಥಾನ ಪಡೆದುಕೊಂಡಿದ್ದಾರೆ.

ಸ್ಪಂದನಾ ಚುನುಮರಿ 597 (ಶೇ.95.52) ಅಂಕ ಪಡೆದು ದ್ವಿತೀಯ ಹಾಗೂ ಚಂದನಶ್ರೀ ಬ. ಬುಜರುಕ 585 (ಶೇ.93.60) ಅಂಕ ಪಡೆದು ತೃತೀಯ ಸ್ಥಾನ ಪಡೆದುಕೊಂಡಿದ್ದಾರೆ.

ಶಾಲೆಯ ಫಲಿತಾಂಶ ಸಾಧನೆ ತೋರಿದ ವಿದ್ಯಾರ್ಥಿಗಳಿಗೆ ಆಡಳಿತ ಮಂಡಳಿ ಹಾಗೂ ಸಿಬ್ಬಂದಿ ವರ್ಗ ಹರ್ಷ ವ್ಯಕ್ತಪಡಿಸಿದ್ದಾರೆ.

## ಭಾರತದ ಸೈನಿಕರಿಗೆ ಶುಭವಾಗಲಿ; ಪಾಕಿಸ್ತಾನಕ್ಕೆ ತಕ್ಕ ಪಾಠ ಕಲಿಸಿ

**ರಬಕವಿ–ಬನಹಟ್ಟಿ :** ರಾಕ್ಷಸಿ ಸಂತಾನವನ್ನು ಹೊಂದಿರುವ ಪಾಕಿಸ್ತಾನದ ವಿರುದ್ಧ ಹೋರಾಡುತ್ತಿರುವ ಭಾರತೀಯ ಸೈನಿಕರಿಗೆ ಭಗವಂತ ವಿಶೇಷ ಶಕ್ತಿಯನ್ನುನೀಡಲಿಮತ್ತುಅವರನ್ನು ರಕ್ಷಣೆ ಮಾಡಲಿ ಎಂಬ ನಿಟ್ಟಿನಲ್ಲಿ ನಾಡಿನ ಎಲ್ಲ ದೇವಸ್ಥಾನಗಳಲ್ಲಿ ವಿಶೇಷ ಪೂಜೆಯನ್ನು ಹಮ್ಮಿಕೊಳ್ಳಲಾಗುತ್ತಿದೆ.

ಭಯೋತ್ಪಾದನೆ ವಿಶ್ವದ ಆತಂಕವಾಗಿದೆ.ಭಯೋತ್ಪಾದನೆಗೆ ಬೆಂಬಲ ನೀಡುತ್ತಿರುವ ಪಾಕಿಸ್ತಾನಕ್ಕೆ ತಕ್ಕ ಪಾಠವನ್ನು ಕಲಿಸುತ್ತಿರುವ ಭಾರತ ಸರ್ಕಾರಕ್ಕೆ ಪ್ರತಿಯೊಬ್ಬರೂ ಬೆಂಬಲವನ್ನು ನೀಡಬೇಕು ಎಂದು ಶಾಸಕ ಸಿದ್ದು



ಸವದಿ ತಿಳಿಸಿದರು.

ಅವರು ಶುಕ್ರವಾರ ಬನಹಟ್ಟಿಯ ಕಾಡಸಿದ್ಧೇಶ್ವರ ದೇವಸ್ಥಾನದಲ್ಲಿ ವಿಶೇಷ ಪೂಜೆಯನ್ನು ನೆರವೇರಿಸಿ ಮಾತನಾಡಿದರು.

ಭಾರತದ 26 ಜನ ಮುಗ್ಧ ಹಿಂದೂ ಧರ್ಮದ ಪ್ರವಾಸಿಗರನ್ನು ನಿರ್ದಾಕ್ಷಿಣ್ಯವಾಗಿ ಕೊಂದು ಹಾಕಿದ ಪಾಪಿ ಪಾಕಿಸ್ತಾನದ ಉಗ್ರಗಾಮಿಗಳ ಒಂಭತ್ತು ನೆಲೆಗಳನ್ನು ನಮ್ಮ ಸೈನಿಕರು ಹೊಡೆದು ಹಾಕಿದ್ದಾರೆ. ಭಾರತ ಈ ಯುದ್ಧದಲ್ಲಿ ಜಯಶಾಲಿಯಾಗಿ ಮುಂದಿನ ದಿನಗಳಲ್ಲಿ ಪಾಕಿಸ್ತಾನ ಭಾರತದ ತಂಟೆಗೆ ಬರದಂತೆ ಬುದ್ಧಿಯನ್ನು ಕಲಿಸಬೇಕು ಎಂದು ಸವದಿ ತಿಳಿಸಿದರು.

ಈ ಸಂದರ್ಭದಲ್ಲಿ ಮೀನಾಕ್ಷಿ ಸವದಿ, ಸಿದ್ಧನಗೌಡ ಪಾಟೀಲ, ಶ್ರೀಶೈಲ ಯಾದವಾಡ, ಶ್ರೀಶೈಲ ಬೀಳಗಿ, ಚಿದಾನಂದ ಹೊರಟ್ಟಿ, ಗೋವಿಂದ ಡಾಗಾ, ಭೀಮಶಿ ಹಂದಿಗುಂದ, ರೇವಪ್ಪ ಗುಣಕಿ, ಚಂದ್ರಶೇಖರ ಮಿರ್ಜಿ, ಮಲಕಪ್ಪ ಪಾಟೀಲ, ಶ್ರೀಶೈಲ ಗಸ್ತಿ, ಗುರು ಶೀಲವಂತ, ಧರೆಪ್ಪ ಉಳ್ಳಾಗಡ್ಡಿ ಸೇರಿದಂತೆ ಇನ್ನೂ ಅನೇಕರು ಭಾಗವಹಿಸಿದ್ದರು.

## ರಸ್ತೆ ಡಾಂಬರೀಕರಣಕ್ಕೆ ಚಾಲನೆ

**ಮಹಾಲಿಂಗಪುರ :** ಪುರಸಭೆಯ ಹದಿನೈದನೇ ಹಣಕಾಸು ಯೋಜನೆ ಅಡಿಯಲ್ಲಿ ಹದಿನಾರನೇ ವಾರ್ಡಿನಲ್ಲಿ ಅಂದಾಜು ಹತ್ತು ಲಕ್ಷ ರೂ. ವೆಚ್ಚದಲ್ಲಿ ಜೆಸಿ ಆಂಗ್ಲ ಮಾಧ್ಯಮ

ಶಾಲೆಯ ಮುಂಭಾಗದ ರಸ್ತೆಯ ಡಾಂಬರೀಕರಣ ಕಾಮಗಾರಿಗೆ ಪುರಸಭೆ ಅಧ್ಯಕ್ಷ ಯಲ್ಲನಗೌಡ ಪಾಟೀಲ ಚಾಲನೆ ನೀಡಿದರು.

ಭಾಜಪನಗರ ಘಟಕದ ಅಧ್ಯಕ್ಷ ಶಂಕರಗೌಡ ಪಾಟೀಲ, ಪುರಸಭೆ ಸದಸ್ಯರಾದ ಬಸವರಾಜ ಯರಗಟ್ಟಿ, ಶೇಖರ ಅಂಗಡಿ, ಮುಖಂಡರಾದ ಈರಪ್ಪ ದಿನ್ನಿಮನಿ, ಡಾ. ಅಶೋಕ ದಿನ್ನಿಮನಿ, ವಿಷ್ಣುಗೌಡ ಪಾಟೀಲ, ಆನಂದ ಘಟ್ನಟ್ಟಿ,

ಶಶಿ ನಕಾತಿ, ಈಶ್ವರ ಮಠಪತಿ, ಅಭಿಯಂತರ ಎಸ್. ಎಂ. ಕಲಬುರ್ಗಿ, ಶ್ರೀಶೈಲ ಕಾರಜೋಳ, ಆನಂದ ಖೋತ, ಬಸವರಾಜ ಆಸಂಗಿ ಮುಂತಾದವರು ಪಾಲ್ಗೊಂಡಿದ್ದರು.

# ಮುದ್ರಾ ಯೋಜನೆ: ನೇಕಾರರಿಗೆ ಸಾಲ ಸೌಲಭ್ಯ

**ಬಾಗಲಕೋಟೆ :** ಪ್ರಸಕ್ತ ಸಾಲಿಗೆ ಪ್ರಧಾನಮಂತ್ರಿ ಮುದ್ರಾ ಯೋಜನೆಯಡಿ ಜಿಲ್ಲೆಯ ಕೈಮಗ್ಗ ನೇಕಾರರಿಗೆ ರಾಷ್ಟ್ರೀಕೃತ ಬ್ಯಾಂಕಗಳಿಂದ ಸಾಲಸೌಲಭ್ಯ ಒದಗಿಸಲು ಅರ್ಹ ಕೈಮಗ್ಗ ನೇಕಾರರಿಂದ ಅರ್ಜಿ ಆಹ್ವಾನಿಸಲಾಗಿದೆ.

ಈ ಯೋಜನೆಯಡಿ ಶೇ.6ರ ಬಡ್ಡಿದರದಲ್ಲಿ ಕೈಮಗ್ಗ ನೇಕಾರರಿಗೆ ರಾಷ್ಟ್ರೀಕೃತ ಬ್ಯಾಂಕ್‌ಗಳಿಂದ ಸಾಲವನ್ನು ಒದಗಿಸಲಾಗುತ್ತದೆ. ಬ್ಯಾಂಕ್‌ನವರು ವಿಧಿಸುವ ಸಾಲದ ಮೇಲಿನ ಗರಿಷ್ಟ ಬಡ್ಡಿ ದರ ಶೇ.7ನ್ನು ಸಾಲ ಮಂಜೂರಾದ ದಿನಾಂಕದಿಂದ ಮೂರು ವರ್ಷಗಳ ಅವಧಿಗೆ ಕೇಂದ್ರ ಸರ್ಕಾರವು ಬಡ್ಡಿ ಸಹಾಯಧನವಾಗಿ ನೀಡಲಿದೆ. ಸಾಲದ ಮೊಬಲಗಿನ ಶೇ.20 ಗರಿಷ್ಟ 10 ಸಾವಿರ ರೂ.ಗಳ ಮಾರ್ಜಿನ ಮನಿ ಹಣವನ್ನು ಸಾಲ ವಿತರಿಸಿದ ಬ್ಯಾಂಕಿನ ವ್ಯವಸ್ಥಾಪಕರು ಜಿಲ್ಲೆಯ ನೋಡಲ್ ಕಚೇರಿ ಪಂಜಾಬ ನ್ಯಾಷನಲ್ ಬ್ಯಾಂಕಿನ ಮೂಲಕ ಪಡೆಯಬಹುದಾಗಿದೆ.

ನೇಕಾರರ ಕೈಮಗ್ಗ ನೇಕಾರಿಕೆ ವ್ಯವಹಾರವನ್ನು ಆಧರಿಸಿ ಈ ಯೋಜನೆಯಡಿ ಗರಿಷ್ಟ 50 ಸಾವಿರ ರೂ.ಗಳ ಸಾಲವನ್ನು ಒದಗಿಸಲಾಗುತ್ತದೆ. ಈ ಸೌಲಭ್ಯಕ್ಕಾಗಿ ಅರ್ಜಿ ನಮೂನೆಯನ್ನು ಉಪನಿರ್ದೇಶಕರು, ಕೈಮಗ್ಗ ಮತ್ತು ಜವಳಿ ಇಲಾಖೆ, ಜಿಲ್ಲಾಡಳಿತ ಭವನ, ನವನಗರ, ಬಾಗಲಕೋಟೆ ಕಚೇರಿಯಿಂದ ಪಡೆದುಕೊಂಡು ಮೇ 31 ರೊಳಗಾಗಿ ಸಲ್ಲಿಸುವಂತೆ ಕೈಮಗ್ಗ ಮತ್ತು ಜವಳಿ ಇಲಾಖೆ ಪ್ರಕಟಣೆ ತಿಳಿಸಿದೆ. ಹೆಚ್ಚಿನ ಮಾಹಿತಿಗಾಗಿ ದೂಸಂ.08354-235463ಗೆ ಸಂಪರ್ಕಿಸಬಹುದಾಗಿದೆ.

# ಆಸ್ಪತ್ರೆಯ ಅತ್ಯುತ್ತಮ ಸೇವಾಗುಣಮಟ್ಟಕ್ಕೆ ಈ ಮಾನ್ಯತೆ ಒಂದು ನಿದರ್ಶನ: ಡಾ. ವೀರಣ್ಣ ಚರಂತಿಮಠ



**ಬಾಗಲಕೋಟೆ:** ಬಿ.ವಿ.ವಿ ಸಂಘದ ಹಾನಗಲ್ಲ ಶ್ರೀಕುಮಾರೇಶ್ವರ ಆಸ್ಪತ್ರೆಯ ಆರೋಗ್ಯಸೇವಾ ಗುಣಮಟ್ಟವನ್ನು ಮೌಲೀಕರಣಗೊಳಿಸಲು (Accreditation) ರಾಷ್ಟ್ರೀಯ ಆಸ್ಪತ್ರೆಗಳ ಮೌಲೀಕರಣ ಮಂಡಳಿಯು (NABH) ಪರಿವೀಕ್ಷಣೆ (Inspection) ನಡೆಸಿ ಮಾನ್ಯತೆ ನೀಡಿದೆ. ಮಂಡಳಿಯು ನೀಡಿದ ಈ ಮಾನ್ಯತೆಯು 'ಪ್ರವೇಶ ಮಟ್ಟದ ಪ್ರಮಾಣೀಕರಣ'ವಾಗಿದ್ದು (Entry Level Certification) ಅತ್ಯುತ್ತಮ ದರ್ಜೆಯ ಆಸ್ಪತ್ರೆಗಳಿಗೆ ಈ ಮಾನ್ಯತೆಯು ಲಭ್ಯವಾಗುತ್ತದೆ.ಹಾನಗಲ್ಲಶ್ರೀಕುಮಾರೇಶ್ವರ ಆಸ್ಪತ್ರೆಯ ಸೇವಾಗುಣಮಟ್ಟ, ವೈದ್ಯಕೀಯ ಸೌಲಭ್ಯ, ವೈದ್ಯರ ಕಾರ್ಯಕ್ಷಮತೆ, ಅರೆವೈದ್ಯಕೀಯ ಮತ್ತು ನರ್ಸಿಂಗ್ ಸಿಬ್ಬಂದಿಯ ಸೇವಾಮನೋಭಾವ, ಪ್ರಯೋಗಾಲಯಗಳು, ಆಸ್ಪತ್ರೆಯ ಕಟ್ಟಡ ಈ ಎಲ್ಲವುಗಳನ್ನು ಪರಿಶೀಲಿಸಿದ ರಾಷ್ಟ್ರೀಯ ಆಸ್ಪತ್ರೆಗಳ ಮೌಲೀಕರಣ ಮಂಡಳಿಯು ಆಸ್ಪತ್ರೆಗೆ ಪ್ರವೇಶ ಮಟ್ಟದ ಪ್ರಮಾಣೀಕರಣ ಮಾನ್ಯತೆ ನೀಡಿದೆ.

ಪ್ರಮಾಣಪತ್ರವನ್ನು ಸ್ವೀಕರಿಸಿ ಮಾತನಾಡಿದ ಬಿ.ವಿ.ವಿ ಸಂಘದ ಕಾರ್ಯಾಧ್ಯಕ್ಷರಾದ ಡಾ.ವೀರಣ್ಣ ಸಿ.ಚರಂತಿಮಠ ಅವರು 'ಎನ್.ಎ.ಬಿ.ಎಚ್ ನಿಂದ ದೊರೆತ ಈ ಮಾನ್ಯತೆಯು ಕುಮಾರೇಶ್ವರ ಆಸ್ಪತ್ರೆಯ ಸೇವಾ ಗುಣಮಟ್ಟದ ಶ್ರೇಷ್ಠತೆಗೊಂದು ನಿದರ್ಶನವಾಗಿದೆ. ಮುಂದಿನ ದಿನಗಳಲ್ಲಿ ಇನ್ನಷ್ಟು ಗುಣಾತ್ಮಕ ಸೇವೆಯನ್ನು ಸಾರ್ವಜನಿಕರಿಗೆ ಒದಗಿಸಲು ಪ್ರೇರಣೆ ಮತ್ತು ಸ್ಫೂರ್ತಿ ದೊರೆತಂತಾಗಿದೆ. ವೈದ್ಯಕೀಯ, ಅರೇವೈದ್ಯಕೀಯ ಮತ್ತು ನರ್ಸಿಂಗ್ ಸಿಬ್ಬಂದಿಯ ಅವಿರತ ಪರಿಶ್ರಮ ಹಾಗೂ ಪ್ರಾಮಾಣಿಕ ಪ್ರಯತ್ನದಿಂದ ಈ ಪ್ರಮಾಣೀಕರಣದ ಮಾನ್ಯತೆ ಆಸ್ಪತ್ರೆಗೆ ಪ್ರಾಪ್ತವಾಗಿದೆ. ಈ ವಿಶೇಷ ಸಾಧನೆಗಾಗಿ ಎಲ್ಲರನ್ನೂ ನಾನು ಅಭಿನಂದಿಸುತ್ತೇನೆ' ಎಂದು ಹೇಳಿದರು.

ಈ ಸಂದರ್ಭ ಬಿ.ವಿ.ವಿ.ಸಂಘದ ಗೌರವ ಕಾರ್ಯದರ್ಶಿಗಳಾದ ಮಹೇಶ ಎನ್.ಅಥಣಿ, ವೈದ್ಯಕೀಯ ಆಡಳಿತ ಮಂಡಳಿ ಕಾರ್ಯಾಧ್ಯಕ್ಷರಾದ ಶ್ರೀ ಅಶೋಕ ಎಮ್.ಸಜ್ಜನ (ಬೇವೂರ), ಮೆಡಿಕಲ್ ಕಾಲೇಜ್ ಪ್ರಾಚಾರ್ಯರಾದ ಡಾ.ಭುವನೇಶ್ವರಿ ಯಳಮಲಿ, ವೈದ್ಯಕೀಯ ಅಧೀಕ್ಷಕರಾದ ಡಾ.ಶ್ರೀರಾಮ ಕೋರಾ ಮತ್ತು ವಿವಿಧ ವಿಭಾಗಗಳ ವೈದ್ಯರು ಉಪಸ್ಥಿತರಿದ್ದರು.

# ಕ್ಯಾಸನಕೆರೆ : ನಿವೃತ್ತ ಯೋಧನಿಗೆ ಗ್ರಾಮಸ್ಥರಿಂದ ಅದ್ದೂರಿ ಸ್ವಾಗತ



**ಕೂಡ್ಲಿಗಿ :** ವಿಜಯನಗರ ಜಿಲ್ಲೆಯ ಕೂಡ್ಲಿಗಿ ತಾಲೂಕಿನ ಕ್ಯಾಸನಕೆರೆಯಲ್ಲಿ ಬುಧವಾರ ಇಡೀ ಗ್ರಾಮವೇ ಹಬ್ಬದಂತೆ ಸಂಭ್ರಮಿಸಿತು.

ಗ್ರಾಮದ ಗಂಗಮ್ಮ ಗಂಡ ಬೊಮ್ಮಪ್ಪ ದಂಪತಿಗಳ ಹಿರಿಯ ಪುತ್ರ ಜಿ, ಶರಣೇಶ ಭಾರತೀಯ ಗಡಿ ಭದ್ರತಾ ಪಡೆಯಲ್ಲಿ (BSF) ಸುಧೀರ್ಘ 21 ವರ್ಷಗಳ ಕಾಲ ಸೇವೆ ಸಲ್ಲಿಸಿ ನಿವೃತ್ತರಾಗಿ ಹುಟ್ಟೂರಾದ ಕ್ಯಾಸನಕೆರೆಗೆ ಮರಳಿದರು.

2004ರಲ್ಲಿ ಸೇನೆಗೆ ಸೇರಿದ ಶರಣೇಶ್ ಆರಂಭದಲ್ಲಿ ರಾಜಸ್ಥಾನ್ ನಂತರ ತ್ರಿಪುರ ಮಣಿಪುರ ಓರಿಸ್ಸಾ ಹರಿಯಾಣ ಸೇರಿದಂತೆ ನಾನಾ ಗಡಿಗಳಲ್ಲಿ ಸೇವೆ ಸಲ್ಲಿಸಿ ನಿವೃತ್ತರಾಗಿ ಸ್ವಗ್ರಾಮಕ್ಕೆ ಆಗಮಿಸುತಿದ್ದಂತೆ ಗ್ರಾಮಸ್ಥರು ಕುಟುಂಬ ವರ್ಗದವರು ಹಾಗೂ ಬಂಧು ಬಳಗದವರು ಆರತಿ ಬೆಳಗಿ ಹೂ ಮಾಲೆ ಹಾಕಿ ಮೆರವಣಿಗೆಯೊಂದಿಗೆ ಸಂಭ್ರಮದಿಂದ ಬರಮಾಡಿಕೊಂಡರು.

ಮೆರವಣಿಗೆಗೆ ಮೊದಲು ಕೂಡ್ಲಿಗಿ ಪಟ್ಟಣದ ಮಹಾತ್ಮ ಗಾಂಧಿ ಪವಿತ್ರ ಚಿತಾಭಸ್ಮಕ್ಕೆ ತೆರಳಿ ಪೂಜೆ ಸಲ್ಲಿಸಿದರು.

ಈ ಸಂದರ್ಭದಲ್ಲಿ ತಾಲೂಕು ದಂಡಾಧಿಕಾರಿಗಳಾದ ವಿ, ಕೆ, ನೇತ್ರಾವತಿ, ಸಿ ಪಿ ಐ ಪ್ರಲ್ಹಾದ್ ಆರ್, ಚನ್ನಗಿರಿ, ಎ ಎಸ್ ಐ ನಾಗೇಂದ್ರಚಾರ್, ವಿಜಯನಗರ ಜಿಲ್ಲಾ ಸಿ ಎ ಪಿ ಎಫ್ ಸಂಘದ ಅಧ್ಯಕ್ಷ ಕಾಟೇರ್ ರಮೇಶ್, ಉಪಾಧ್ಯಕ್ಷ ಎಚ್, ಗಂಗಣ್ಣ, ಆನಂದಪ್ಪ, ಮುಜುಬ್ ರಹಿಮಾನ್ ಪರಮೇಶ್, ಅಂಬರೀಶ್, ರಾಘವೇಂದ್ರ, ಹಾಲಿ ಯೋಧ ಧರ್ಮಪ್ಪ, ಸೇರಿದಂತೆ ಕುಟುಂಬ ವರ್ಗದವರು ಹಾಗೂ ಗ್ರಾಮಸ್ಥರು ಪಾಲ್ಗೊಂಡಿದ್ದರು.

**ವರದಿ ಹೆಚ್ಚು ವೀರಣ್ಣ**

# ಕುಮಾರೇಶ್ವರ ಆಸ್ಪತ್ರೆಗೆ ಅತ್ಯಾಧುನಿಕ ಇನ್‌ಕ್ಯೂಬೇಟರ್ ದೇಣಿಗೆ ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿಯಡಿ ಉಜ್ಜೀವನ ಬ್ಯಾಂಕ್ ನೆರವು




**ಬಾಗಲಕೋಟೆ :** ನಗರದ ಬಿ.ವಿ.ವಿ.ಸಂಘದ ಹಾನಗಲ್ಲ ಶ್ರೀ ಕುಮಾರೇಶ್ವರ ಆಸ್ಪತ್ರೆಗೆ ಸಾಂಸ್ಥಿಕ (ಕಾರ್ಪೊರೇಟ್) ಸಾಮಾಜಿಕ ಜವಾಬ್ದಾರಿಯಡಿ ಉಜ್ಜೀವನ ಬ್ಯಾಂಕ್‌ನ ಬಾಗಲಕೋಟೆ ಶಾಖೆಯಿಂದ ಸುಮಾರು 6 ಲಕ್ಷ ರೂಪಾಯಿಗಳ ಮೌಲ್ಯದ ಅತ್ಯಾಧುನಿಕ ತಂತ್ರಜ್ಞಾನದ ಫಾನೆಮ್ 1186 ಸಿ ಮಾದರಿಯ "ಇನ್‌ಫ್ಯಾಂಟ್ ಇನ್‌ಕ್ಯೂಬೇಟರ್" ಯಂತ್ರವನ್ನು ದೇಣಿಗೆಯಾಗಿ ನೀಡಲಾಯಿತು. ಈ ಇನ್‌ಕ್ಯೂಬೇಟರ್‌ಯಂತ್ರನವಜಾತಶಿಶುಗಳ ತೀವ್ರನಿಗಾ ಘಟಕದಲ್ಲಿ ಬಳಕೆಯಾಗುತ್ತದೆ. ಅವಧಿಪೂರ್ವ ಜನಿಸಿದ ನವಜಾತ ಶಿಶುಗಳ ಅಂಗಾಂಗಗಳು ಬೆಳವಣಿಗೆ ಹೊಂದಲು ಶಿಶುಗಳನ್ನು ಈ ಇನ್‌ಕ್ಯೂಬೇಟರ್ ಯಂತ್ರದಲ್ಲಿ ಇಡಲಾಗುತ್ತದೆ. ಫಾನೆಮ್ 1186 ಸಿ ಮಾದರಿಯ ಈ ಇನ್‌ಫ್ಯಾಂಟ್ ಇನ್‌ಕ್ಯೂಬೇಟರ್ ಯಂತ್ರವು ನಿರ್ವಹಿಸಲು ಸರಳವಾಗಿದ್ದು ನಿಯಂತ್ರಿತ ಆಕ್ಸಿಜನ್ ವ್ಯವಸ್ಥೆಯನ್ನು ಹೊಂದಿದೆ. ಶಿಶುವಿನ ಹೃದಯ ಬಡಿತ, ನಾಡಿ ಬಡಿತ, ರಕ್ತದೊತ್ತಡ, ಇ.ಸಿ.ಜಿ, ದೇಹದ ಉಷ್ಣತೆ ಇತ್ಯಾದಿ ಮಾಹಿತಿಯನ್ನು ಪ್ರದರ್ಶಿಸಲು ಎಲ್.ಇ.ಡಿ ವ್ಯವಸ್ಥೆ ಇದೆ. ಅಗತ್ಯದ ಪ್ರಮಾಣದಷ್ಟು ಶಾಖ ಮತ್ತು ತೇವಾಂಶವನ್ನು ಒದಗಿಸುವ ಅನುಕೂಲವಿದೆ.

ಉಜ್ಜೀವನ ಬ್ಯಾಂಕ್‌ನ ಬೆಂಗಳೂರು ಕೇಂದ್ರ ಕಚೇರಿಯ ಸಿ.ಎಸ್.ಆರ್ ಹೆಡ್ ಕೆ.ಎಮ್. ತೌಫಿಕ್, ಸ್ಟೇಟ್ ಹೆಡ್ ರಾಘವೇಂದ್ರ ವಿ, ಉತ್ತರ ಕರ್ನಾಟಕ ಮತ್ತು ಗೋವಾ ಕ್ಷೇತ್ರದ ಏರಿಯಾ ಹೆಡ್ ಪ್ರವೀಣ ಮಟ್ಟಿಕಲ್ಲಿ ಮತ್ತು ಬಾಗಲಕೋಟೆ ಶಾಖಾ ವ್ಯವಸ್ಥಾಪಕರಾದ ತಿಮ್ಮಣ್ಣ ಮೇರಾಕರ್ ಅವರು ಹಾನಗಲ್ಲ ಶ್ರೀ ಕುಮಾರೇಶ್ವರ ಆಸ್ಪತ್ರೆಗೆ ಭೇಟಿ ನೀಡಿ ಈ ಯಂತ್ರವನ್ನು ಬಿ.ವಿ.ವಿ.ಸಂಘದ ಕಾರ್ಯಾಧ್ಯಕ್ಷರಾದ ಡಾ.ವೀರಣ್ಣ ಸಿ.ಚರಂತಿಮಠ ಅವರಿಗೆ ಹಸ್ತಾಂತರಿಸಿದರು.

ದೇಣಿಗೆಯನ್ನು ಸ್ವೀಕರಿಸಿ ಮಾತನಾಡಿದ ಡಾ.ವೀರಣ್ಣ ಸಿ.ಚರಂತಿಮಠ ಅವರು 'ಕಾರ್ಪೊರೇಟ್ ಸಂಸ್ಥೆಗಳು ಸಾಮಾಜಿಕ ಹೊಣೆಗಾರಿಕೆಗೆ ಆದ್ಯತೆ ನೀಡುತ್ತಿರುವುದು ಅಭಿನಂದನೀಯ. ಸಮಾಜದ ಪ್ರಗತಿ ಎನ್ನುವುದು ಹೊಣೆಗಾರಿಕೆಯಾದಾಗ ಅಲ್ಲಿ ಅಭಿವೃದ್ಧಿ ಸಾಧ್ಯವಾಗುತ್ತದೆ.

ಉಜ್ಜೀವನ ಬ್ಯಾಂಕ್ ಕುಮಾರೇಶ್ವರ ಆಸ್ಪತ್ರೆಗೆ ಈ ಅತ್ಯಾಧುನಿಕ ವೈದ್ಯಕೀಯ ಉಪಕರಣವನ್ನು ದೇಣಿಯಾಗಿ ನೀಡಿ ತನ್ನ ಸಾಮಾಜಿಕ ಜವಾಬ್ದಾರಿ ಮತ್ತು ಕಾಳಜಿಯನ್ನು ಅರ್ಥಪೂರ್ಣವಾಗಿ ಅನಾವರಣಗೊಳಿಸಿದೆ.

ಬ್ಯಾಂಕ್‌ನ ಈ ನೆರವನ್ನು ಸದ್ಬಳಕೆ ಮಾಡಿಕೊಳ್ಳಲಾಗುವುದು ಮತ್ತು ಸಹಕಾರವನ್ನು ಕೃತಜ್ಞತೆಯಿಂದ ಸ್ಮರಿಸುತ್ತೇವೆ' ಎಂದು ನುಡಿದರು.

ಈ ಸಂದರ್ಭ ಬಿ.ವಿ.ವಿ.ಸಂಘದ ಗೌರವ ಕಾರ್ಯದರ್ಶಿಗಳಾದ ಮಹೇಶ ಎನ್. ಅಥಣಿ, ವೈದ್ಯಕೀಯ ಆಡಳಿತ ಮಂಡಳಿ ಕಾರ್ಯಾಧ್ಯಕ್ಷರಾದ ಅಶೋಕ ಎಮ್.ಸಜ್ಜನ (ಬೇವೂರ), ಮೆಡಿಕಲ್ ಕಾಲೇಜಿನ ಪ್ರಾಚಾರ್ಯರಾದ ಡಾ.ಭುವನೇಶ್ವರಿ ಯಳಮಲಿ, ವೈದ್ಯಕೀಯ ಅಧೀಕ್ಷಕರಾದ ಡಾ.ಶ್ರೀರಾಮ ಕೋರಾ, ಬಿ.ವಿ.ವಿ ಸಂಘದ ಹಣಕಾಸು ಅಧಿಕಾರಿ ಅನಂತ ಓಂಕಾರ ಮತ್ತು ಆಸ್ಪತ್ರೆ ಹಾಗೂ ಬ್ಯಾಂಕ್ ಸಿಬ್ಬಂದಿ ಉಪಸ್ಥಿತರಿದ್ದರು.

# ಗ್ರಾಮ ಪಂಚಾಯತ್ ಗ್ರಂಥಪಾಲಕರು/ ಮೇಲ್ವಿಚಾರಕರ ಸಭೆ

## ಗ್ರಾಮೀಣ ಗ್ರಂಥಾಲಯಗಳು ಮಾದರಿ ಕೇಂದ್ರಗಳಾಗಬೇಕು: ಜಿ.ಪಂ ಸಿಇಓ ರಾಹುಲ್ ಶಿಂಧೆ




**ಬೆಳಗಾವಿ :** ಜಿಲ್ಲೆಯಲ್ಲಿ ಯುವಕರು ಯುಪಿಎಸ್.ಸಿ ಪರೀಕ್ಷೆಗಳನ್ನು ಪಾಸ್ ಆಗುವ ಮೂಲಕ ಸಾಧನೆ ಮಾಡಿದ್ದಾರೆ. ಗ್ರಂಥಾಲಯಗಳಲ್ಲಿಚರಿತ್ರೆ,ಸಾಮಾಜಿಕ,ಕಥೆ, ಕಾದಂಬರಿಗಳಪುಸ್ತಕಗಳಜೊತೆಗೆಸ್ಪರ್ಧಾತ್ಮಕ ಪರೀಕ್ಷೆಗೆ ಅನುಕೂಲವಾಗುವ ನಿಟ್ಟಿನಲ್ಲಿ ಗ್ರಂಥಾಲಯಗಳಲ್ಲಿ ವಿವಿಧ ಸ್ಪರ್ಧೆಗಳಿಗೆ ತಯಾರಿ ನಡೆಸುತ್ತಿರುವ ಅಭ್ಯರ್ಥಿಗಳಿಗೆ ಪುಸ್ತಕಗಳು ಸಹಕಾರಿಯಾಗಬೇಕು ಎಂದು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಕಾಧಿಕಾರಿ ರಾಹುಲ್ ಶಿಂಧೆ ಅವರು ತಿಳಿಸಿದರು.

ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಗುರುವಾರ (ಮೇ.08)ನಡೆದ ಗ್ರಾಮ ಪಂಚಾಯತ್ ಗ್ರಂಥಪಾಲಕರು/ ಮೇಲ್ವಿಚಾರಕರ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಮಾಹಿತಿ ಸಂಗ್ರಹಣೆಗೆ ಸಹಾಯ ಮಾಡುವುದೇ ಗ್ರಂಥಾಲಯದ ಮೂಲ ಕರ್ತವ್ಯ. ಮಾಹಿತಿ-ತಂತ್ರಜ್ಞಾನದ ಪ್ರಭಾವದಿಂದ ಗ್ರಂಥಾಲಯವು ತನ್ನ ಸೇವೆ ಹಾಗೂ ಕಾರ್ಯಕ್ಷಮತೆಯಲ್ಲಿ ಹೆಚ್ಚಿಕೊಳ್ಳುವ ನಿಟ್ಟಿನಲ್ಲಿ ಎಲ್ಲರೂ ಕಾರ್ಯ ನಿರ್ವಹಿಸಬೇಕು ಎಂದು ಹೇಳಿದರು.

ಗ್ರಂಥಾಲಯದ ಮಾಹಿತಿ ವಿಸ್ತರಣೆಯು ಕಲಿಕೆಗೆ ಅಭಿರುಚಿಗೆ, ಚಿಂತನಶೀಲತೆ, ತಂತ್ರಗಾರಿಕೆ, ಯೋಜನಾಅಧ್ಯಯನ, ಬೌದ್ಧಿಕ ಸಾಮರ್ಥ್ಯ, ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಬೇಕಾದ ಅನುಕೂಲವಾಗುವ ಮಾಹಿತಿಯನ್ನು ಪೂರೈಸುವಂತಾಗಬೇಕು ಎಂದು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಕಾಧಿಕಾರಿ ರಾಹುಲ್ ಶಿಂಧೆ ಹೇಳಿದರು.

ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಬರುವ ಸಾರ್ವಜನಿಕ ಗ್ರಂಥಾಲಯಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಗ್ರಂಥಾಪಾಲಕರ ವೇತನ ಪಾವತಿಗೆ ಕಡ್ಡಾಯವಾಗಿ ಬಯೋಮೆಟ್ರಿಕ್ ಅನ್ವಯವಾಗಲಿದೆ. ಬಯೋಮೆಟ್ರಿಕ್ ಹಾಜರಾತಿ ವರದಿಯ ಆಧಾರಿತ ವೇತನ ಪಾವತಿ ಮಾಡಲಾಗುವುದು ಎಂದು ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿ ಬಸವರಾಜ ಹೆಗ್ಗನಾಯಕ ಅವರು ತಿಳಿಸಿದರು.ಗ್ರಂಥಪಾಲಕರುಗ್ರಂಥಾಲಯದ ವೇಳೆಯಲ್ಲಿ ಕಡ್ಡಾಯವಾಗಿ ಹಾಜರಿರಬೇಕು. ಗ್ರಂಥಾಲಯಕ್ಕೆ ಬರುವ ವಿದ್ಯಾರ್ಥಿಗಳು, ಸಾರ್ವಜನಿಕರಿಗೆ ಅನಾನುಕೂಲವಾಗದಂತೆ ನೋಡಿಕೊಳ್ಳಬೇಕು. ಸರ್ಕಾರದ ನಿರ್ದೇಶನದಂತೆ ಎಲ್ಲ ಗ್ರಾಮ ಪಂಚಾಯತಿ ಸಿಬ್ಬಂದಿಗಳಿಗೆ ಹಾಗೂ ಗ್ರಂಥ ಪಾಲಕರಿಗೆ ಬಯೋಮೆಟ್ರಿಕ್ ಕಡ್ಡಾಯವಾಗಿರುತ್ತದೆ ಎಂದು ತಿಳಿಸಿದರು.

ಗ್ರಂಥಾಲಯದ ಸ್ವಚ್ಚತೆ, ಬುಕ್ಸ್ ಸ್ಟಾಕ್ ಸಂಗ್ರಹಣೆ ವ್ಯವಸ್ಥೆ ಅಚ್ಚುಕಟ್ಟಾಗಿರಬೇಕು. ಅಲ್ಲಿ ಓದಿದ ವಿದ್ಯಾರ್ಥಿಗಳು ಉನ್ನತ ಅಧಿಕಾರಿಗಳಾಗಿ, ಜನಪ್ರತಿನಿಧಿಯಾಗಿ ಉದಾರಣೆ ನೀಡುವಂತಾಗಬೇಕು. ಈ ನಿಟ್ಟಿನಲ್ಲಿ ಎಲ್ಲ ಗ್ರಂಥಪಾಲಕರು ಗ್ರಂಥಾಲಯವನ್ನು ಸೂಕ್ತ ರೀತಿಯಲ್ಲಿ ನಿರ್ವಹಣೆ ಮಾಡಬೇಕು ಎಂದು ಜಿ.ಪಂ ಉಪ ಕಾರ್ಯದರ್ಶಿ ಬಸವರಾಜ ಹೆಗ್ಗನಾಯಕ ಅವರು ಸಲಹೆ ನೀಡಿದರು.

ಸಭೆಯಲ್ಲಿ ಎಲ್ಲ ಗ್ರಾಮ ಪಂಚಾಯತಿ ಗ್ರಂಥಪಾಲಕರು/ಮೇಲ್ವಿಚಾರಕರು ಉಪಸ್ಥಿತರಿದ್ದರು.

# ಪ್ರೇಮಕ್ಕ ಅಂಗಡಿಗೆ ಸನ್ಮಾನ



**ಬೈಲಹೊಂಗಲ :** ಬಸವತತ್ವ ಪ್ರಸಾರಕ್ಕಾಗಿ ಸ್ವೀಡನ್ ದೇಶದಪ್ರವಾಸಕ್ಕೆಗೊಂಡಿರುವಜಾಗತಿಕಲಿಂಗಾಯತ ಮಹಾಸಭಾ ಮಹಿಳಾ ಘಟಕದ ಬೆಳಗಾವಿ ಜಿಲ್ಲಾ ಅಧ್ಯಕ್ಷೆ ಶ್ರೀಮತಿ ಪ್ರೇಮಕ್ಕ ಗಂಗಾಧರ ಅಂಗಡಿ (ನಾಗನೂರು) ಅವರನ್ನು ಬೆಂಗಳೂರಿನ ಕೇಂದ್ರ ಬಸವ ಸಮಿತಿಯಿಂದ ಕಾರ್ಯಕಾರಿ ಸಮಿತಿಯ ಹಿರಿಯ ಸದಸ್ಯರಾದ ಮೋಹನ ಬಸನಗೌಡ ಪಾಟೀಲ ಅವರು ಸನ್ಮಾನಿಸಿ, ಗೌರವಿಸಿ, ಶುಭ ಕೋರಿದರು.

ಕನ್ನಡ ಸಾಹಿತ್ಯ ಪರಿಷತ್ತಿನ ಬೈಲಹೊಂಗಲ ತಾಲೂಕು ಅಧ್ಯಕ್ಷರಾದ ಎನ್. ಆರ್. ಠಕ್ಕಾಯಿ, ಕನ್ನಡ ಜಾನಪದ ಪರಿಷತ್ತಿನ ಬೈಲಹೊಂಗಲ ತಾಲೂಕಿನ ಅಧ್ಯಕ್ಷರಾದ ಚಂದ್ರಶೇಖರ ರುದ್ರಪ್ಪ ಕೊಪ್ಪದ, ಶರಣ ಸಾಹಿತ್ಯ ಪರಿಷತ್ತಿನ ಬೈಲಹೊಂಗಲ ತಾಲೂಕ ಅಧ್ಯಕ್ಷರಾದ ಸಂತೋಷ ಕೊಳವಿ, ಜಾಗತಿಕ ಲಿಂಗಾಯತ ಮಹಾಸಭಾ ಬೈಲಹೊಂಗಲ ತಾಲೂಕು ಮಹಿಳಾ ಘಟಕದ ಅಧ್ಯಕ್ಷೆ ಶ್ರೀಮತಿ ರಾಜೇಶ್ವರಿ ದೇಮನಗೌಡರ, ಹಿರಿಯ ಸಹಕಾರಿ ಗಂಗಾಧರ ನಾಗಪ್ಪ ಅಂಗಡಿ (ನಾಗನೂರ) ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

# ಶರಣರ ವಚನಗಳಲ್ಲಿ ವಿಜ್ಞಾನ ಮತ್ತು ವೈಚಾರಿಕತೆ



**ರಾಯಭಾಗ :** 12ನೆಯ ಶತಮಾನದ ಬಸವಾದಿ ಶರಣರ ವಚನಗಳಲ್ಲಿ ಪ್ರಸ್ತುತ 'ವಿಜ್ಞಾನ ಮತ್ತು ವೈಚಾರಿಕ ಸಂಗತಿಗಳು' ಇಂದಿಗೂ ಪ್ರಸ್ತುತವಾಗಿವೆ ಎಂದು ಸರಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಧ್ಯಾಪಕ ಎಂ.ಕೆ. ವಿಭೂತಿ ಹೇಳಿದರು.

ವಚನ ಪಿತಾಮಹ ಡಾ. ಫ.ಗು. ಹಳಕಟ್ಟಿ ರಾಷ್ಟ್ರೀಯ ಟ್ರಸ್ಟ್ ಅಡಿಯಲ್ಲಿ ಶರಣ ಚೇತನ ಬಳಗ ಹಮ್ಮಿಕೊಂಡ ತಿಂಗಳ ಅಧ್ಯಾತ್ಮ ಜ್ಞಾನ ದಾಸೋಹ ಕಾರ್ಯಕ್ರಮದಲ್ಲಿ 'ಶರಣರ ವಚನಗಳಲ್ಲಿ ವಿಜ್ಞಾನ ಮತ್ತು ವೈಚಾರಿಕತೆ' ಎಂಬ ವಿಶೇಷ ಉಪನ್ಯಾಸ ನಿಮಿತ್ತ ಮಾತನಾಡಿದರು.

ಶರಣರೆಲ್ಲರೂ ಸಾಕಷ್ಟು ವಿದ್ಯಾವಂತರಾಗಿರಲಿಲ್ಲ ಆದರೆ ತಮ್ಮ ಸುತ್ತಲಿನ ಪ್ರಕೃತಿ ಮತ್ತು ಸಮಾಜವನ್ನು ಚೆನ್ನಾಗಿ ಅರಿತಿದ್ದರು. ಹೀಗಾಗಿ ಶರಣರ ವಚನಗಳಲ್ಲಿ ವಿಜ್ಞಾನ ಮತ್ತು ವೈಚಾರಿಕ ಸಂಗತಿಗಳು ಸಾಕಷ್ಟು ಪ್ರಸ್ತಾಪಗೊಂಡಿವೆ. ಅಲ್ಲದೆ ಇಂದಿಗೂ ಅವು ಪ್ರಸ್ತುತವಾಗಿವೆ ಎಂದು ವಚನಗಳನ್ನು ಸಾಕ್ಷಿಗೊಳಿಸಿ ವಿವರಿಸಿದರು.

ನಿವೃತ್ತ ಶಿಕ್ಷಣ ಸಂಯೋಜಕರಾದ ಎಸ್. ಎಸ್ .ಕಾಂಬಳೆ ಆಧ್ಯಾತ್ಮ ಕಾರ್ಯಕ್ರಮಗಳಿಂದ ಮನುಷ್ಯನ ಅಂತರಂಗ ಶುದ್ಧಿಯಾಗುತ್ತದೆ ಆದ್ದರಿಂದ ಶರಣ ಸಂತರ ಅನುಭಾವದ ನುಡಿಗಳನ್ನು ಮನುಷ್ಯ ಮೆಲಕು ಹಾಕುತ್ತಿರಬೇಕು ಎಂದರು.

ಹೆಸರಾಂತ ಸಾಹಿತಿಗಳಾದ ಜ್ಯೋತಿ ಹೊಸೂರ ಅವರ ಧರ್ಮಪತ್ನಿ ಪುಷ್ಪಾ ಹೊಸೂರ ವೇದಿಕೆಯಲ್ಲಿ ಉಪಸ್ಥಿತರಿದ್ದರು. ವಚನ ಪಿತಾಮಹ ಡಾ.ಫ.ಗು. ಹಳಕಟ್ಟಿ ರಾಷ್ಟ್ರೀಯ ಟ್ರಸ್ಟ್ ಅಧ್ಯಕ್ಷ ಡಾ. ಬಿ. ಎಂ. ಪಾಟೀಲ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಶರಣರ ಚರಿತ್ರೆಗಳು ಮತ್ತು ಅವರ ವಚನಗಳು ನಮ್ಮ ಜೀವನ ವಿಕಾಸಗೊಳಿಸಲು ತುಂಬಾ ಅಗತ್ಯವಾಗಿವೆ ಎಂದು ಅಭಿಪ್ರಾಯಪಟ್ಟರು.

ಡಾ ಗಾಯತ್ರಿ ಬಾನೆ, ಸುಭದ್ರಾ ಕುಸ್ತಿಗಾರ, ಶ್ರೀದೇವಿ ಕುಂಬಾರ, ಭಾರತೀ ಪಾಟೀಲ, ಕಲ್ಲಪ್ಪ ಹಾರೂಗೇರಿ, ಅಶೋಕ ದೇಶಿಂಗೆ, ಮಲ್ಲೇಶ ದೊಡ್ಡಮನಿ, ಶಿವಪುತ್ರ ಅಮರಶೆಟ್ಟಿ , ಪಿ.ಬಿ.ಮುನ್ಯಾಳ,ಸಣ್ಣಪ್ಪ ಮೀಶಿ.ಅಪ್ಪಾಸಾಬ ಮುಗಳಖೋಡ, ಚನ್ನಗೌಡ ಪಾಟೀಲ, ವಿರೂಪಾಕ್ಷ ಮಾದರ ಮೊದಲಾದವರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಪಾವಣಿ ಮತ್ತು ಶಾಂಭವಿ ದೊಡವಾಡ ಪ್ರಾರ್ಥನೆ ಹಾಡಿದರು ಎಚ್.ಕೆ ಗುರುವ ಸ್ವಾಗತಿಸಿದರು.

ಇದೇ ಸಂದರ್ಭದಲ್ಲಿ ಶ್ರೀ ಕುಮಾರ ಅವಳೆ ಅವರನ್ನು ಸನ್ಮಾನಿಸಿ ಸತ್ಕರಿಸಲಾಯಿತು ಹೆಚ್.ಎ. ಭಜಂತ್ರಿ ಶರಣು ಮಾಡಿದರು, ಕಾಡೇಶ ಐಹೊಳೆ ಕಾರ್ಯಕ್ರಮ ನಿರೂಪಿಸಿದರು.

# ರ್‍ಯಾಂಕ್ ಪಡೆದ ವಿದ್ಯಾರ್ಥಿನಿಗೆ ಪ್ರಾಥಮಿಕ ಆರೋಗ್ಯ ಕೇಂದ್ರದಿಂದ ಸನ್ಮಾನ

## ಬಡತನದಲ್ಲಿ ಅರಳಿದ ಪ್ರತಿಭೆ ಕುಮಾರಿ ಶಾಲಿನಿ: ಡಾ. ಗೀತಾ ಕಾಂಬಳೆ



**ಬೆಳಗಾವಿ :** ದೃಷ್ಟಿ ದೋಷ, ಬಡತನ ಮೆಟ್ಟಿ ನಿಂತು ಕುಮಾರಿ ಶಾಲಿನಿ ಅಭೂತಪರ್ವ ಸಾಧನೆ ಮಾಡಿದ್ದಾಳೆ ಈಕೆಯ ಸಾಧನೆ ಎಲ್ಲರಿಗೂ ಸ್ಪೂರ್ತಿಯಾಗಲಿ ಎಂದು ಜಿಲ್ಲಾ ಅಂದತ್ವ ನಿವಾರಣಾಧಿಕಾರಿ ಡಾ. ಗೀತಾ ಕಾಂಬಳೆ ಅವರು ಹೇಳಿದರು.

ಪ್ರಾಥಮಿಕ ಆರೋಗ್ಯ ಕೇಂದ್ರ. ಐಗಳಿಯಲ್ಲಿ ಗುರುವಾರ (ಮೇ.07) ನಡೆದ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಪ್ರಥಮ ರ್‍ಯಾಂಕ್ ಪಡೆದ ವಿದ್ಯಾರ್ಥಿನಿ ಕುಮಾರಿ ಶಾಲಿನಿ ಹಣಮಂತ ಬಡಿಗೇರ್ ಅವರ ಸನ್ಮಾನ ಸಮಾರಂಭದಲ್ಲಿ ಅವರು ಮಾತನಾಡಿದರು.

ಕುಮಾರಿ ಶಾಲಿನಿ ದೃಷ್ಟಿದೋಷದಿಂದ ಬಳಲುತ್ತಿದ್ದಳು, ಆಕೆ ಪಾಲಕರಿಗೆ ಸಾಕಷ್ಟು ಬಾರಿ ಮನವಿ ಮಾಡಿದಾಗ ಆರ್ಥಿಕ ಅನಾನುಕೂಲತೆಯಿಂದ ಸರಿಯಾದ ಚಿಕಿತ್ಸೆ ನೀಡಲು ಸಾಧ್ಯವಾಗಿರಲಿಲ್ಲ. ನೇತ್ರಾಧಿಕಾರಿಗಳಾದ ಪ್ರಕಾಶ ಪರಣಾಕರ ಶಾಲೆಗೆ ಹೋಗಿ ತಪಾಸಣೆ ಮಾಡಿ ದೃಷ್ಟಿ ದೋಷವನ್ನು ಪತ್ತೆ ಹಚ್ಚಿ ಸರ್ಕಾರದಿಂದ ಉಚಿತ ಕನ್ನಡಕ ನೀಡಿದ್ದು, ವಿದ್ಯಾರ್ಥಿನಿಗೆ ಹೆಚ್ಚಿನ ವಿದ್ಯಾಭ್ಯಾಸ ಮಾಡಲು ಅನುಕೂಲವಾಗಿ ಉನ್ನತ ಶ್ರೇಣಿಯಲ್ಲಿ ಪಾಸಾಗಿದ್ದಾಳೆ ಎಂದು ಡಾ. ಗೀತಾ ಕಾಂಬಳೆ ಮೆಚ್ಚುಗೆ ವ್ಯಕ್ತಪಡಿಸಿದರು. ಈ ಸಂದರ್ಭದಲ್ಲಿ ಅಥಣಿ ತಾಲೂಕ ಆರೋಗ್ಯ ಅಧಿಕಾರಿಗಳು ಡಾ. ಬಸಗೌಡ ಕಾಗೆ, ಆಯುಷ್ಯ ವೈದ್ಯಾಧಿಕಾರಿ ಡಾ. ಪೂರ್ಣಿಮಾ ಅಂಕಲಗಿ, ಇಲಾಖೆಯ ಎಲ್ಲ ಸಿಬ್ಬಂದಿಗಳು ಹಾಗೂ ಆಶಾ ಕಾರ್ಯಕರ್ತರು ಉಪಸ್ಥಿತರಿದ್ದರು.

# ಹಿಪೊಕ್ಯಾಂಪಸ್ ಆಗಮನ ಕೊಪ್ಪಳದಲ್ಲಿ ಶೈಕ್ಷಣಿಕ ಕ್ರಾಂತಿ: ಮಲ್ಹೋತ್ರಾ–ಕಣವಿ ಜಂಟಿ ಹೇಳಿಕೆ

**ಕೊಪ್ಪಳ :** ಹಿಪೊಕ್ಯಾಂಪಸ್ ಮಿಲ್ಲೆನಿಯಂ ಸಾರ್ವಜನಿಕ ಶಾಲೆಯೊಂದಿಗಿನ ಸಹಭಾಗಿತ್ವವನ್ನು ಮಿಲೇನಿಯಮ್ ಪಬ್ಲಿಕ್ ಸ್ಕೂಲ್ ಪ್ರಕಟಿಸಿದೆ, ಹಿಪೊಕ್ಯಾಂಪಸ್ ಶಾಲೆಗಳ ಆಗಮನವು ಕೊಪ್ಪಳ ನಲ್ಲಿನ ಶೈಕ್ಷಣಿಕ ಕ್ರಾಂತಿಯುಂಟುಮಾಡುತ್ತದೆ" ಎಂದು ಹಿಪೊಕ್ಯಾಂಪಸ್ ಸಿಇಓ ಉಮೇಶ್ ಮಲ್ಹೋತ್ರಾ ಹಾಗೂ ಮೆಲೇನಿಯಮ್ ಪಬ್ಲಿಕ್ ಶಾಲೆಯ ಅಧ್ಯಕ್ಷ ಗಿರೀಶ್ ಕಣವಿ ಜಂಟಿ ಹೇಳಿಕೆಯಲ್ಲಿ ತಿಳಿಸಿದರು.

ಅವರು ಮಂಗಳವಾರದಂದು ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿ ಹಿಪೊಕ್ಯಾಂಪಸ್‌ನೊಂದಿಗಿನ ಪಾಲುದಾರಿಕೆಯನ್ನು ಘೋಷಿಸಲು ಉತ್ಸುಕವಾಗಿದೆ, ಇದು ಕಲಿಕೆಯ ಭವಿಷ್ಯವನ್ನು ಕೊಪ್ಪಳಗೆ ತಂದಿತು, ಈ ರೋಮಾಂಚಕಾರಿ ಸಹಯೋಗವು ಈ ಪ್ರದೇಶದ ವಿದ್ಯಾರ್ಥಿಗಳಿಗೆ ಶಿಕ್ಷಣವನ್ನು ಕ್ರಾಂತಿಗೊಳಿಸುವುದಾಗಿಭರವಸೆನೀಡುತ್ತದೆ, ಅವರಿಗೆ ಅತ್ಯುತ್ತಮ ಅಂತರರಾಷ್ಟ್ರೀಯ ಶಿಕ್ಷಣಕ್ಕೆಪ್ರವೇಶವನ್ನುನೀಡುತ್ತದೆ. "ಶ್ರೇಷ್ಠತೆಗೆ ನಮ್ಮ ಬದ್ಧತೆಯು ಅಚಲವಾಗಿದೆ, 10 ಎಕರೆ ಕ್ಯಾಂಪಸ್‌ನಲ್ಲಿ ಪ್ರತಿಫಲಿಸುತ್ತದೆ




ಮತ್ತು ಪ್ರಯೋಗಾಲಯಗಳು ಮತ್ತು ಸೌಲಭ್ಯಗಳಲ್ಲಿನ ಮಹತ್ವದ ಹೂಡಿಕೆಗಳು. ಹಿಪೊಕ್ಯಾಂಪಸ್‌ನೊಂದಿಗಿನ ಈ ಸಹಭಾಗಿತ್ವವು ನಮ್ಮ ಶೈಕ್ಷಣಿಕ ಮಾನದಂಡಗಳನ್ನು ಹೆಚ್ಚಿಸುತ್ತದೆ, ಅವುಗಳನ್ನು ಭಾರತದ ಉನ್ನತ ಅಂತರರಾಷ್ಟ್ರೀಯ ಶಾಲೆಗಳೊಂದಿಗೆ ಜೋಡಿಸುತ್ತದೆ.

ಹಿಪೊಕ್ಯಾಂಪಸ್‌ಸಂಸ್ಥೆಯಉಪಾಧ್ಯಕ್ಷರಾದ ಲಲಿತಾ ರೆಡ್ಡಿ ಮಾತನಾಡಿ ವಿನ್ಯಾಸ ಆಲೋಚನಾ ಕ್ಲಬ್‌ಗಳು, ಮಾತನಾಡುವ ಇಂಗ್ಲಿಷ್ ಉಪಕ್ರಮಗಳು ಮತ್ತು ಬೋರ್ಡ್ ಪರೀಕ್ಷೆಯಫಲಿತಾಂಶಗಳನ್ನುಸುಧಾರಿಸಲು ಬಲವಾದ ಒತ್ತು ನೀಡುವುದು ಎಂಐಟಿ–ಜೆಪಿಎಲ್,ಯುಎಸ್ ಎಂದು ತಂಡದಿಂದ ಶ್ಲಾಘಿಸಲ್ಪಟ್ಟ ಹಿಪೊಕ್ಯಾಂಪಸ್‌ನ ಶಿಶುವಿಹಾರದ ಕಾರ್ಯಕ್ರಮವು ಗಮನಾರ್ಹ ಲಕ್ಷಣವಾಗಿದೆ, 8 ಸಿಬಿಎಸ್‌ಇ ಶಾಲೆಗಳು, 9 ರಾಜ್ಯ ಮಂಡಳಿ ಶಾಲೆಗಳು ಮತ್ತು 40 ಪ್ರಿ ಸ್ಕೂಲ್ ಗಳನ್ನು ನಿರ್ವಹಿಸುತ್ತಿರುವ ಹಿಪೊಕ್ಯಾಂಪಸ್ 500 ಶಿಕ್ಷಣತಜ್ಞರ ತಂಡದೊಂದಿಗೆ 10,000 ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಸೇವೆ ಸಲ್ಲಿಸುತ್ತಿದೆ. ಅವರ ಕೆಬಿಸಿ (ಜ್ಞಾನ, ನಡವಳಿಕೆ, ಸಾಮರ್ಥ್ಯ) ವಿಧಾನವು ಸಮಗ್ರ ಕಲಿಕೆಯ ಅನುಭವವನ್ನು ನೀಡುತ್ತದೆ, ಶೈಕ್ಷಣಿಕ ಶ್ರೇಷ್ಠತೆ, ಪಾತ್ರಗಳ ಅಭಿವೃದ್ಧಿ ಮತ್ತು 21 ನೇ ಶತಮಾನದ ಅಗತ್ಯ ಕೌಶಲ್ಯಗಳ ಮೇಲೆ ಕೇಂದ್ರೀಕರಿಸುತ್ತದೆ. ನಡೆಯುತ್ತಿರುವ ಶಿಕ್ಷಕರ ತರಬೇತಿ, ದತ್ತಾಂಶ–ಚಾಲಿತ ವಿಧಾನಗಳು ಮತ್ತು ಸಂಶೋಧನೆ ಮತ್ತು ಅಭಿವೃದ್ಧಿಗೆ ಬಲವಾದ ಒತ್ತು ನೀಡುವ ಮೂಲಕ, ಹಿಪೊಕ್ಯಾಂಪಸ್ ವೈವಿಧ್ಯಮಯ ಸಮುದಾಯಗಳಲ್ಲಿ ಭವಿಷ್ಯದ–ಸಿದ್ಧ ಕಲಿಯುವವರನ್ನು ಬೆಳೆಸುತ್ತಿದ್ದಾರೆ. ವಿಜ್ಞಾನ ಪ್ರದರ್ಶನಗಳು, ಯುವ ಸಂಸತ್ತುಗಳು ಮತ್ತು ಕ್ರೀಡಾಕೂಟಗಳಂತಹ ಪಠೇತರ ಚಟುವಟಿಕೆಗಳ ಮೂಲಕ ಶೈಕ್ಷಣಿಕ ಶ್ರೇಷ್ಠತೆ, ಪಾತ್ರ ಅಭಿವೃದ್ಧಿ ಮತ್ತು ಸಮಗ್ರ ಶಿಕ್ಷಣದ ಬಗ್ಗೆ ಶಾಲೆಯು ಹೆಮ್ಮೆಪಡುತ್ತದೆ ಎಂದರು.

ಕೊಪ್ಪಳದ ಜನತೆ ಬೇಗಬೇಗ ಪ್ರವೇಶ ಪಡೆದು ಈ ಸೌಲಭ್ಯವನ್ನು ಪಡೆದುಕೊಳ್ಳುವಂತೆ ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಶಾಲೆಯ ಮುಖ್ಯೋಪಾಧ್ಯಾಯರಾದ ಸ್ವಪ್ನಾ ಉಪಸ್ಥಿತರಿದ್ದರು.

## ಧರಣಿಗೆ ನಾಯಕ, ಕ್ಯಾವಟರ್, ಸಿವಿಸಿ ಬೆಂಬಲ | ಸ್ಥಳದಲ್ಲಿಯೇ ಗ್ರಾಮ ಸಭೆ
# ಕುಣಿಕೆರೆ ಗ್ರಾಮದ ದೊಡ್ಡ ಕೆರೆಯಲ್ಲಿ ಅಕ್ರಮ ಮಾರಾಟ ತಡೆಗೆ ಆಗ್ರಹ



**ಕೊಪ್ಪಳ:**ತಾಲೂಕಿನಕುಣಿಕೇರಿಗ್ರಾಮದದೊಡ್ಡಕೆರೆಯ ಮಣ್ಣನ್ನಅಕ್ರಮ ಮಾರಾಟ ಮಾಡಲು ಗಣಿ ಮತ್ತು ಭೂ ವಿಜ್ಞಾನ ಇಲಾಖೆಯವರು ಅನುಮತಿಸಿರೋದನ್ನು ವಿರೋಧಿಸಿ ಹಮ್ಮಿಕೊಂಡಿರುವ ಸತ್ಯಾಗ್ರಹ ಧರಣಿಗೆ ಸೋಮವಾರ ಬಿಜೆಪಿ ರಾಜ್ಯ ಕಾರ್ಯಕಾರಿಣಿ ಸದಸ್ಯ ಬಸವರಾಜ ಕ್ಯಾವಟರ್, ಜೆಡಿಎಸ್ ರಾಜ್ಯ ಕೋರ್ ಕಮಿಟಿ ಸದಸ್ಯ ಸಿ.ವಿ.ಚಂದ್ರಶೇಖರ, ವಿಪ ಸದಸ್ಯೆ ಹೇಮಲತಾ ನಾಯಕ ಬೆಂಬಲ ವ್ಯಕ್ತಪಡಿಸಿದರು.

ಕೃಷಿಯೇತರ ಚಟುವಟಿಕೆಗಳೊಂದಿಗೆ ಕೆರೆಯ ಮಣ್ಣನ್ನು ಬಳಸುವಂತಿಲ್ಲ ಎಂಬ ಕಾನೂನಿದ್ದರೂ ಕಾನೂನು ಉಲ್ಲಂಘನೆ ಮಾಡಿ ಫಲವತ್ತಾದ ಕೆರೆಯ ಮಣ್ಣು ಸಾಗಾಣಿಕೆಗೆ ಅನುಮತಿ ನೀಡಿದ ಗ್ರಾಮ ಪಂಚಾಯಿತಿ ಮತ್ತು ಗಣಿ ಮತ್ತು ಭೂವಿಜ್ಞಾನ ಇಲಾಖೆಯವರ ವಿರುದ್ಧವಾಗಿ ಹಮ್ಮಿಕೊಂಡ ಹೋರಾಟದಲ್ಲಿ ಮೂವರು ನಾಯಕರು ಆಡಳಿತ ವ್ಯವಸ್ಥೆಯ ವಿರುದ್ಧ ಕಿಡಿಕಾರಿದರು. ಅಲ್ಲದೆ, ಸ್ಥಳಕ್ಕೆ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ತಾಲೂಕ ಪಂಚಾಯಿತಿ ಕಾರ್ಯ ನಿರ್ವಾಹಕ ಅಧಿಕಾರಿಗಳನ್ನು ಕರೆಸಿ ಗ್ರಾಮ ಪಂಚಾಯಿತಿಯ ಸದಸ್ಯರೆಲ್ಲ ಸೇರಿಸಿ, ಪಂಚಾಯತಿಯ ಸಭಾಂಗಣದಲ್ಲಿ ತುರ್ತು ಸಭೆ ಆಯೋಜಿಸಿ, ಸೋಮವಾರವೇ ಪಂಚಾಯಿತಿಯಿಂದ ಠರಾವು ಪಾಸ್ ಮಾಡಿ ಅಕ್ರಮ ಮಣ್ಣು ಮಾರಾಟ ತಡೆಗಟ್ಟಲು ನಿರ್ಧಾರವನ್ನು ಮಾಡಲಾಯಿತು.

ಈ ಧರಣಿಯ ಹೋರಾಟಗಾರರ ಬೆಂಬಲದೊಂದಿಗೆ ಪಾಲ್ಗೊಂಡಿದ್ದ ಎಲ್ಲಾ ನಾಯಕರು ಕುಣಿಕೇರಿ ಮತ್ತು ಕುಣಿಕೇರಿ ತಾಂಡ ಗ್ರಾಮದ ಎಲ್ಲಾ ನಾಗರಿಕರ ಪರವಾಗಿ ನಿರ್ಣಯವನ್ನು ಕೈಗೊಳ್ಳಲಾಯಿತು.

ವಿಧಾನ ಪರಿಷತ್ ಸದಸ್ಯೆ ಹೇಮಲತಾ ನಾಯಕ್, ಜೆಡಿಎಸ್ ಮುಖಂಡರಾದ ಸಿ.ವಿ. ಚಂದ್ರಶೇಖರ್, ಗ್ರಾಮ ಪಂಚಾಯತಿ ಸದಸ್ಯರಾದ ಹುಚ್ಚಪ್ಪ ಚೌದ್ರಿ, ಈರಮ್ಮ ಮಡಿವಾಳ, ರವಿ ಮೋಚಿ, ಮಹದೇವಕ್ಕ ಹಲಗಿ, ಮುಖಂಡರಾದ ಮೂರ್ತೆಪ್ಪ, ರಮೇಶ್ ಡಂಬ್ರಹಳ್ಳಿ, ಚನ್ನವೀರಯ್ಯ, ಮಲ್ಲೇಶಪ್ಪ ಸೋಂಪುರ, ರಾಮಣ್ಣ ಬೆಳವಿನಾಳ, ಮಂಜಮ್ಮ ಸಚಿಮಠ, ಗಿರಿಯಮ್ಮ ಗೌಡ್ರು, ಹನುಮಮ್ಮ ಕುರುಬರ, ರುದ್ರಮ್ಮ ಮೂಲಿಮನಿ, ತಿಪ್ಪಣ್ಣ ಚೌದ್ರಿ, ಮಾದೇಗೌಡ, ಉದಯ ನಾಯಕ್, ಗವಿ ಅಲಗಿ, ಬಸವರಾಜ್ ಮಡಿವಾಳ, ರಮೇಶ್ ವಾಲಿಕಾರ್, ರಮೇಶ್ ಕನ್ಯಾಳ್, ಬಸವರಾಜ ಹಳ್ಳಿಕೇರಿ, ಗದಿಗೆಪ್ಪ ಚೌದ್ರಿ, ಗಿರಿಯಪ್ಪ ಸೇರಿ ಇನ್ನಿತರರು ಪಾಲ್ಗೊಂಡಿದ್ದರು.

# ವಿಶ್ವಮಾನವ ಸಂದೇಶ ಸಾರಿದವರು ಬಸವಣ್ಣ: ಪ್ರೋ. ಶರಣಬಸಪ್ಪ ಬಿಳಿಯಲೇ

**ಕೊಪ್ಪಳ :** ಸಮಾನತೆ, ಸ್ವಾಭಿಮಾನ, ಬದುಕನ್ನು ಕಟ್ಟಿಕೊಟ್ಟವರು, ಇವನಾರವ ಇವನಾರವ ಎಂದು ಹೇಳುವುದರ ಮೂಲಕ ವಿಶ್ವಮಾನವ ಸಂದೇಶವನ್ನು ಸಾರಿದವರು ಸಾಂಸ್ಕೃತಿಕ ನಾಯಕ, ವಿಶ್ವಗುರು ಬಸವಣ್ಣನವರು ಎಂದು ಪ್ರೋ. ಶರಣಬಸಪ್ಪ ಬಿಳಿಯಲೇ ಅಭಪ್ರಾಯಪಟ್ಟರು. ನಗರದ ಶ್ರೀ ಗವಿಸಿದ್ಧೇಶ್ವರ ಪದವಿಮಹಾವಿದ್ಯಾಯದಕನ್ನಡವಿಭಾಗದಿಂದ ಆಂತರಿಕ ಭರವಶಕೋಶದಡಿಯಲ್ಲಿ ವಿಶ್ವಮಾನವ ಬಸವಣ್ಣನವರ 802ನೇ ಜಯಂತೋತ್ಸದ ನಿಮಿತ್ಯ ಆಯೋಜಿಸಿದ ಉಪನ್ಯಾಸ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು 12ನೇ ಶತಮಾನದಲ್ಲಿ ಸಾಮಾಜಿಕಕ್ರಾಂತಿಯಜೊತೆಗೆವಿಚಾರಮತ್ತುವೈಚಾರಿಕ ಕ್ರಾಂತಿಯನ್ನು ಮಾಡಿದವರು ಬಸವಣ್ಣನವರು. ಬಸವಣ್ಣ ಮತ್ತು ಬಸವಾದಿ ಶರಣರ ವಿಚಾರಧಾರೆಗಳು ಸರ್ವಕಾಲಕ್ಕೂ ಆದರ್ಶವಾಗಿವೆ. 12ನೇ ಶತಮಾನದ ಶರಣ ಶರಣೆಯರ ವಿಚಾರಧಾರೆಗಳನ್ನು ತಾವೆಲ್ಲರೂ ಬದುಕಿನಲ್ಲಿ ರೂಢಿಸಿಕೊಳ್ಳಬೇಕು ಎಂದು ಹೇಳಿದರು.



ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಮಹಾವಿದ್ಯಾಯದ ಪ್ರಾಚಾರ್ಯ ಡಾ. ಚನ್ನಬಸವ ಮಾತನಾಡಿ ಬಸವಣ್ಣನವರು ಸಾಮಾಜಿಕ ಸಮಾನತೆಯ ಹರಿಕಾರರಾಗಿದ್ದಾರೆ ಸರ್ವ ಶರಣ–ಶರಣೆಯರ ವಿಚಾರಗಳು ನಮ್ಮ ಬದುಕನ್ನು ಸುಂದರಗೂಳಿಸುತ್ತವೆ. ಇಂತಹ ಶ್ರೇಷ್ಠ ವ್ಯಕ್ತಿಗಳ ಚಿಂತನೆ, ಅಧ್ಯಯನ ನಮಗೆ ಅಗತ್ಯವಾಗಿದೆ. ಇಂತಹ ಕಾರ್ಯುಕ್ರಮಗಳ ಮೂಲಕ ಅವರ ವಿಚಾರಧಾರೆ ಅರಿತು ತಾವೆಲ್ಲರು ಆಚಾರಗೂಳಿಸಬೇಕು ಎಂದರು.

ಡಾ. ಅರುಣಕುಮಾರ ಎ.ಜಿ, ಮಂಜುನಾಥ ಹಿರೇಮಠ, ಕನಕಪ್ಪ, ಡಾ, ಮಂಜುನಾಥ ಗಾಳಿ ಹಾಗೂ ವಿದ್ಯಾರ್ಥಿ ವಿದ್ಯಾರ್ಥಿನಿಯರು ಈ ಸಂಧರ್ಭದಲ್ಲಿ ಉಪಸ್ಥಿತರಿದ್ದರು. ಉಪನ್ಯಾಸಕ ಅಮರೇಶ ತವಳಕೇರಿ ಸ್ವಾಗತಿಸಿದರು, ಕು, ಅನುಶಾ ಪ್ರಾರ್ಥಿಸಿದರು, ಡಾ. ಸುಮಲತಾ. ಎಂ, ನಿರೂಪಿಸಿದರು. ಡಾ. ನಾಗರಾಜ ದಂಡೋತಿ ವಂದಿಸಿದರು ಎಂದು ಮಹಾವಿದ್ಯಾಲಯದ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

# ಮೊಣಕಾಲು ನೋವು ಗುಣಪಡಿಸಿಕೊಳ್ಳಲು ಗೋವಾದಿಂದ ಕೊಪ್ಪಳಕ್ಕೆ ಬಂದ ಮಹಿಳೆ

**ಕೊಪ್ಪಳ :** ಇಲ್ಲಿನ ಸುಜೊಕ್ ಥೆರೆಪಿಸ್ಟ್ ಮೋಯಿನ್ ಖಾತನ್ ರವರ ಬಳಿ ಕಳೆದ ವರ್ಷ ಫಾತಿಮಾ ಬೇಗಂ ಎಂಬ ಮಹಿಳೆ ಮೊಣಕಾಲು ನೋವಿನ ಚಿಕಿತ್ಸೆ ಪಡೆದುಕೊಂಡು ಗುಣಮುಖರಾಗಿ ತನ್ನ ಸಂಬಂಧಿ ಗೋವಾ ದ ನಿವಾಸಿ ಮಹಿಳೆಯೊಬ್ಬಳು ಮೊಣಕಾಲ್ ನೋವಿನ ಚಿಕಿತ್ಸೆಗಾಗಿ ಕೊಪ್ಪಳದ ಸೂಜೋಕ್ ಥೆರೇಪಿಸ್ಟ್ ಮೋಯಿನ್ ಖಾನ್ ರವರ ಬಳಿ ಕರೆದುಕೊಂಡು ಬಂದಿದ್ದಾರೆ. ಈ ಹಿಂದೆ ಫಾತಿಮಾ ಬೇಗಮ್ ಎಂಬ ಮಹಿಳೆ ಗೆ ಮೊಣಕಾಲು ನೋವು ಇತ್ತು ಬಹಳಷ್ಟು ಕಡೆ ತೋರಿಸಿಕೊಂಡು ಚಿಕಿತ್ಸೆ ಪಡೆದುಕೊಂಡರು ಸಹ ಮೊಣಕಾಲು ನೋವು ಕಡಿಮೆಯಾಗಿದ್ದಿಲ್ಲ, ಆಗ ಮೋಯೀ ನ್ ಖಾನ್ ರವರ ಬಳಿ ಬಂದು ಯಾವುದೇ ಔಷಧಿ ಇಂಜೆಕ್ಷನ್ ಗಳಿಲ್ಲದೆ ಸುಜೋಕ್ ತೆರಪಿಸ್ಟ್ ಮೂಲಕ ಚಿಕಿತ್ಸೆ ಪಡೆದುಕೊಂಡು ಗುಣಮುಖರಾದ ಬಳಿಕ ಈಗ ಅವರ ಸಂಬಂಧಿ ಗೋವಾದಿಂದ ಬಂದು ಇಲ್ಲಿ ಚಿಕಿತ್ಸೆ ಪಡುತ್ತಿರುವುದು ವಿಶೇಷ, ಇದರ ಬಗ್ಗೆ ಫಾತಿಮಾ ಬೇಗಂ ರವರು ತಮ್ಮ ಮೊಣಕಾಲು ನೋವಿನ ಬಗ್ಗೆ ಮತ್ತು ಈಗ ಗುಣ ಹೊಂದಿರುವ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿ ಸುಜೋಕ್ ಥೆರಪಿಸ್ಟ್ ಮೂಲಕ ಸದರಿ ರೋಗಕ್ಕೆ ಚಿಕಿತ್ಸೆ ಪಡೆದು ಯಾವುದೇ ಔಷಧಿ ಇಂಜೆಕ್ಷನ್ ಗಳಿಲ್ಲದೆ ರೋಗ ಗುಣಪಡಿಸಿಕೊಳ್ಳಬಹುದು ಇದು ಒಳ್ಳೆಯ ಕಾರ್ಯವಾಗಿದೆ ಎಂದು ಸುಜೋಕ್ ಥೆರಪಿಸ್ಟ್ ಮೋಯೀನ್ ಖಾನ್ ರವರ ಕಾರ್ಯದ ಬಗ್ಗೆ ಮತ್ತು ಅವರ ಸೇವೆ ಬಗ್ಗೆ ಅವರು ಮೆಚ್ಚುಗೆ ವ್ಯಕ್ತಪಡಿಸಿ ಅಭಿನಂದಿಸಿದ್ದಾರೆ.

# ಹಳ್ಳಿ ಹೈದನಿಗೆ ರಾಜ್ಯಪಾಲರಿಂದ ಚಿನ್ನದ ಪದಕ

**ಕೊಪ್ಪಳ :** ತಾಲೂಕಿನ ಮುದ್ದಾಬಳ್ಳಿ ಗ್ರಾಮದ ಸುದರ್ಶನ್ ಹನುಮಗೌಡ ಪೊಲೀಸ್ ಪಾಟೀಲ್ ಗೆ,ಎಂ ಎಸ್ಸಿ ಸ್ನಾತಕೋತ್ತರ ಪದವಿಯಲ್ಲಿ ಅತಿಹೆಚ್ಚು ಅಂಕ ಪಡೆದ ಪ್ರಯುಕ್ತ ಚಿನ್ನದ ಪದಕ ಲಭಿಸಿದೆ.

ದಿನಾಂಕ6ರಂದುಬೆಂಗಳೂರಿನಲ್ಲಿಜರುಗಿದರಾಜೀವ್ ಗಾಂಧಿ ಆರೋಗ್ಯ ವಿಜ್ಞಾನ ವಿಶ್ವವಿದ್ಯಾಲಯದ 27ನೇ ಘಟಿಕೋತ್ಸವ ಕಾರ್ಯಕ್ರಮದಲ್ಲಿ,ಚಿನ್ನದ ಪದಕ ಹಾಗು ಪ್ರಮಾಣ ಪತ್ರವನ್ನು ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಪ್ರದಾನ ಮಾಡಿದರು.

ಹುಬ್ಬಳ್ಳಿಯ ಕರ್ನಾಟಕ ವೈದ್ಯಕೀಯ ವಿಜ್ಞಾನ ಸಂಸ್ಥೆಯ ಎಂ ಎಸ್ಸಿ ನರ್ಸಿಂಗ್ ಕಾಲೇಜಿನಲ್ಲಿ, *ಸಮುದಾಯ ಆರೋಗ್ಯ& ಶುಶ್ರೂಷೆ* ಎಂಬ ವಿಷಯದಲ್ಲಿ ಅತಿ ಹೆಚ್ಚು ಅಂಕಗಳಿಸಿದ ಪ್ರಯುಕ್ತ




ಚಿನ್ನದ ಪದಕ ಪಡೆದಿದ್ದಾರೆ.

ಪ್ರಶಸ್ತಿ ವಿತರಣಾ ಕಾರ್ಯಕ್ರಮದಲ್ಲಿ ಸಚಿವ ಡಾ.ಶರಣ ಪ್ರಕಾಶ್ ಪಾಟೀಲ್, ಉಪಕುಲಪತಿ ಡಾ.ಭಗವಾನ್ ಮತ್ತು ಅಜೀಂ ಪ್ರೇಮ್ ಜೀ ಫೌಂಡೇಶನ್ ಅಧ್ಯಕ್ಷ ಅಜೀಂ ಪ್ರೇಮ್ ಜೀ ಮತ್ತಿತರಿದ್ದರು.

ಸುದರ್ಶನ್ ಗೆ ಚಿನ್ನದ ಪದಕ ಲಭಿಸಿದ್ದಕ್ಕೆ ಆತನ ತಂದೆ ತಾಯಿ,ಕುಟುಂಬ ವರ್ಗ ಮತ್ತು ಕಾಲೇಜಿನ ಸಿಬ್ಬಂದಿ ಹರ್ಷ ವ್ಯಕ್ತಪಡಿಸಿದ್ದಾರೆ.

# ಸರ್ವಸ್ವವನ್ನು ತೊರೆದು ಕುಟುಂಬಕ್ಕಾಗಿ ದುಡಿಯುವವನೇ ನಿಜವಾದ ಕಾರ್ಮಿಕ: ಚಂದ್ರಶೇಖರ ಬುರಾಣಪುರ



**ವಿಜಯಪುರ :** ತನ್ನ ನೆಮ್ಮದಿಯ ಜೀವನವನ್ನು ತೊರೆದು, ತನ್ನ ಕುಟುಂಬಕ್ಕಾಗಿ ತನ್ನ ಸರ್ವಸ್ವವನ್ನೇ ಮುಡಿಪಾಗಿಟ್ಟುಕೊಂಡು ಯಾವುದೇ ವಂಚನೆ ಮೋಸ ಮಾಡದೇ ಮಳೆ, ಗಾಳಿ, ಬಿಸಿಲು ಇವೆಲ್ಲವನ್ನು ಲೆಕ್ಕಿಸದೇ ಬೆವರು ಸುರಿಸಿ ದುಡಿಯುವ ಇಳಿವಯಸ್ಸಿನ ಕಾರ್ಮಿಕ ಚಂದ್ರು ಪೂಜಾರಿ ಇಂದಿನ ಯುವಕರಿಗೆ ಸ್ಫೂರ್ತಿಯಾಗಿದ್ದಾರೆ ಎಂದು ಚಂದ್ರಶೇಖರ ಬುರಾಣಪುರ ಹೇಳಿದರು.

ಮುದ್ರಣ ಕಾರ್ಮಿಕ ಸಂಘದ ವತಿಯಿಂದ ಕಾರ್ಮಿಕರ ದಿನಾಚರಣೆ ಅಂಗವಾಗಿ ಕಾರ್ಮಿಕರಿಗೆ ಸನ್ಮಾನ ಕಾರ್ಯಕ್ರಮ ಹಮ್ಮಿಕೊಂಡ ಸಂದರ್ಭದಲ್ಲಿ ಮಾತನಾಡಿದರು.

ಇಂದಿನ ಯುಗದಲ್ಲಿ ಯುವಕರು ಮೊಬೈಲ್‌ಗೆ ಅಂಟಿಕೊಂಡಿದ್ದಾರೆ. ಇತ್ತೀಚಿನ ದಿನದಲ್ಲಿ ಜೀವನ ಸಾಗಿಸುವುದು ದುಬಾರಿಯಾಗಿದೆ.

ಅಪ್ಪನ ಆದಾಯಕ್ಕೆ ಅಂಟಿಕೊಂಡಿರುವ ಯುವಕರು ದಾರಿ ತಪ್ಪುತ್ತಿದ್ದಾರೆ. ಈಗ ಅವರು ದಾರಿ ತಪ್ಪಿದರೆ ಇಳಿವಯಸ್ಸಿನಲ್ಲಿ ದುಡಿಯುವ ಕಾರ್ಮಿಕ ಚಂದ್ರು ಅವರ ಹಾಗೆ ಪರಿಸ್ಥಿತಿ ಉಂಟಾಗುತ್ತದೆ. ಅದಕ್ಕಾಗಿ ಯುವಕರು ವಿದ್ಯಾವಂತರಾಗಬೇಕೆಂದು ಕಿವಿ ಮಾತು ಹೇಳಿದರು.

ಇದೇ ಸಂದರ್ಭದಲ್ಲಿ ಅಧ್ಯಕ್ಷ ಚಿದಾನಂದ ವಾಲಿ ಮಾತನಾಡಿ,ಕಾರ್ಮಿಕರಲ್ಲಿತಾರತಮ್ಯತೋರುತ್ತಿರುವ ಸರ್ಕಾರ ಜನರ ಪರಿಸ್ಥಿತಿಯನ್ನು ಅರಿತುಕೊಳ್ಳಬೇಕು. ನಮ್ಮ ಮುದ್ರಣ ಕಾರ್ಮಿಕರಿಗೂ ಸಹಿತ ಕಾರ್ಮಿಕ ಇಲಾಖೆಯಿಂದ ಸೌಲಭ್ಯ ಸಿಗುವಂತೆ ಸರ್ಕಾರ ಗಮನ ಹರಿಸಬೇಕೆಂದು ಒತ್ತಾಯಿಸಿದರು.

ಹಿರಿಯ ಕಾರ್ಮಿಕ ಚಂದ್ರು ಪೂಜಾರಿ ಅವರಿಗೆ ಶಾಲು ಹೊದಿಸಿ ಸನ್ಮಾನಿಸಿ ಗೌರವಿಸಲಾಯಿತು.

ಇದೇ ಸಂದರ್ಭದಲ್ಲಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ವೆಂಕಟೇಶ ಕಪಾಲಿ, ನಿರ್ದೇಶಕರಾದ ನಾಗರಾಜ ಬಿಸನಾಳ, ಬಸವರಾಜ ಹಾವಿನಾಳ, ಖಜಾಂಚಿ ಹನೀಫ ಮುಲ್ಲಾ, ಜಗದೀಶ ಶಹಾಪೂರ, ಉಮೇಶ ಶಿವಶರಣ, ದೀಪಕ ಜಾಧವ, ನಬಿ ಮಕಾಂದಾರ, ಸದಸ್ಯರಾದ ಬಸವರಾಜ ಬಿರಾದಾರ, ಕುಮಾರಸ್ವಾಮಿ ವಿಭೂತಿಮಠ ಮುಂತಾದವರು ಇದ್ದರು.

# ಬಸವಣ್ಣ– ಅಕ್ಕಮಹಾದೇವಿ ವೈಚಾರಿಕ : ಶಂಕರಗೌಡ ಸೋಮನಾಳ

**ವಿಜಯಪುರ :** ಹನ್ನೆರಡನೆಯ ಶತಮಾನ ವಿಶ್ವದ ಇತಿಹಾಸದಲ್ಲಿ ಸುವರ್ಣ ಅಕ್ಷರಗಳಲ್ಲಿ ಬರೆದಿಡುವಂತದ್ದು. ಬಸವಣ್ಣನವರು ಹಾಗೂಅಕ್ಕಮಹಾದೇವಿ12ನೇಶತಮಾನದ ಶ್ರೇಷ್ಠ ವಚನಕಾರರಾಗಿ ಸಮಾಜದ ಮೌಢ್ಯಗಳನ್ನು ಕಿತ್ತೊಗೆದು ವೈಚಾರಿಕ ಚಿಂತಕರಾಗಿ ಹೊರಹೊಮ್ಮಿದ್ದಾರೆ ಎಂದು ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದ ಕುಲಸಚಿವ ಶಂಕರಗೌಡ ಸೋಮನಾಳ ಅಭಿಪ್ರಾಯಪಟ್ಟರು.

ಮಂಗಳವಾರ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯ ಶಿಕ್ಷಣ ಅಧ್ಯಯನ ವಿಭಾಗ ಹಾಗೂ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಸಹಯೋಗದಲ್ಲಿ ವಿಶ್ವವಿದ್ಯಾನಿಲಯದ ಸಭಾಂಗಣದಲ್ಲಿ ಬಸವ ಜಯಂತಿಯ ನಿಮಿತ್ಯ ಜರುಗಿದ ವಿಶ್ವಗುರು ಬಸವಣ್ಣನವರ ಹಾಗೂ ವೈರಾಗ್ಯನಿಧಿ ಅಕ್ಕಮಹಾದೇವಿಯವರ ಕುರಿತ ಚಿಂತನಾ ಗೋಷ್ಠಿಯನ್ನು ಉದ್ಘಾಟಿಸಿ ಮಾತನಾಡಿದ ಅವರು, ಬಸವಾದಿ ಶಿವಶರಣರು ಸಮಾಜಕ್ಕೆ ನೀಡಿದ ಮೌಲಿಕ ಕೊಡುಗೆಯನ್ನು ಸ್ಮರಿಸುತ್ತಾ ವಚನಕಾರರ ಸಂದೇಶಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುವ



ಪ್ರಾಮಾಣಿಕ ಪ್ರಯತ್ನ ಮಾಡೋಣ ಎನ್ನುತ್ತ ಪ್ರಶಿಕ್ಷಣಾರ್ಥಿಗಳಿಗೆ ವಚನಕಾರರ ಜೀವನದ ಯಶೋಗಾಥೆಯನ್ನು ಕುರಿತು ಪ್ರಶ್ನೆಗಳನ್ನು ಕೇಳುತ್ತಾ ರಸಪ್ರಶ್ನೆಗಳ ಮೂಲಕ ವಿಜೇತರಿಗೆ ಬಹುಮಾನ ವಿತರಿಸುತ್ತ ಮಾತನಾಡಿದರು.

ಅಧ್ಯಕ್ಷತೆ ವಹಿಸಿದ್ದ ಶಿಕ್ಷಣ ಅಧ್ಯಯನ ವಿಭಾಗದ ಪ್ರಾಧ್ಯಾಪಕ ಪ್ರೊ ವಿಷ್ಣು ಶಿಂಧೆ ಮಾತನಾಡಿ, ಬಸವಾದಿ ಶಿವಶರಣರು ಮನುಕುಲಕ್ಕೆ ನೀಡಿದ ಶ್ರೇಷ್ಠ ಕೊಡುಗೆಗಳೆಂದರೆ ವಚನಗಳು ಎನ್ನುತ್ತ, ಸಾಮಾಜಿಕ, ಧಾರ್ಮಿಕ, ಆಧ್ಯಾತ್ಮಿಕ ಹಾಗೂ ನೈತಿಕ ತಳಹದಿಯ ಮೇಲೆ ಆದಶ9 ಸಮಾಜ ನಿಮಿ9ಸಿಕೊಟ್ಟ ವಚನಕಾರರ ಸಂದೇಶ ನಮ್ಮ ಜೀವನಕ್ಕೆ ಒಂದು ದಿವ್ಯ ಔಷಧವಿದ್ದಂತೆ ಎನ್ನುತ್ತ , ಭಾವೀ ಶಿಕ್ಷಕರು ಬಸವಾದಿ ಶಿವ ಶರಣರ ವಚನಗಳನ್ನು ಅರಿತುಕೊಂಡಿರಬೇಕೆಂದರು.

"ಬಸವಣ್ಣನವರ ವಚನಗಳಲ್ಲಿ ಜೀವನ ಮೌಲ್ಯಗಳು" ಎಂಬ ವಿಷಯದ ಕುರಿತು ಉಪನ್ಯಾಸ ನೀಡಿದ ಜಿಲ್ಲಾ ಕಸಾಪ ಗೌರವ ಕಾರ್ಯದರ್ಶಿ ಡಾ. ಮಾಧವ ಗುಡಿ ಮಾತನಾಡಿ, ಹೆಣ್ಣಿನ ಬಗ್ಗೆ ಅಭಿಮಾನದಿಂದ ಧ್ವನಿ ಎತ್ತಿದ ಬಸವಣ್ಣನವರು ಸ್ತ್ರೀ ಸಮಾನತೆ, ಕಾಯಕ, ದಾಸೋಹ ಮತ್ತು ಶ್ರಮ ಸಿದ್ಧಾಂತದ ಮೂಲಕ ವಿಶ್ವ ಸಂವಿಧಾನಕ್ಕೆ ಬಸವಣ್ಣನವರು ನೀಡಿದ ಜೀವನದ ಮೌಲ್ಯಗಳನ್ನು ಅವರ ವಚನಗಳ ಮೂಲಕ ಹಲವಾರು ದೃಷ್ಟಾಂತಗಳನ್ನು ವಿವರಿಸಿ, ಇಂದು ಅವುಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುವ ಅಗತ್ಯವಿದೆ ಎಂದರು.

"ಅಕ್ಕಮಹಾದೇವಿಯ ವಚನಗಳಲ್ಲಿ ಭಕ್ತಿ ಮತ್ತು ವೈರಾಗ್ಯ" ಎಂಬ ವಿಷಯದ ಕುರಿತು ಉಪನ್ಯಾಸ ನೀಡಿದ ವಿಜಯಪುರ ತಾಲೂಕಾ ಕಸಾಪ ಗೌರವ ಸಲಹೆಗಾರರು, ಸಾಹಿತಿ ಶಿಲ್ಪಾ ಭಸ್ಮೆ ಮಾತನಾಡಿ, 12ನೇ ಶತಮಾನದ ಮೊಟ್ಟಮೊದಲ ಕವಯಿತ್ರಿ. ಅಕ್ಕಮಹಾದೇವಿಯ ವಚನಗಳು ಆಕೆಯ ಶಿವನ ಭಕ್ತಿಯ ಮೂತ9ರೂಪವಾಗಿವೆ ಆಧ್ಯಾತ್ಮಿಕತೆ, ಸಾಮಾಜಿಕ ನ್ಯಾಯ ಮತ್ತು ಲಿಂಗ ಸಮಾನತೆಯ ಆಳವಾದ ಅಥ9ವನ್ನು ತಿಳಿಸುತ್ತದೆ ಎಂದರು.

ವೇದಿಕೆಯ ಮೇಲೆ ಬಸವ ಅಧ್ಯಯನ ಪೀಠದ ಸಂಯೋಜಕ ಡಾ. ರಾಜಕುಮಾರ ಮಾಲಿಪಾಟೀಲ ಹಾಗೂ ಸಾಹಿತಿ, ಶಿಕ್ಷಕಿ ಶೋಭಾ ಬಡಿಗೇರ ಉಪಸ್ಥಿತರಿದ್ದರು.

ಪ್ರಶಿಕ್ಷಣಾರ್ಥಿ ನೇತ್ರಾ ಸ್ವಾಗತಿಸಿದರು. ಲಕ್ಷ್ಮೀ ಪಾಟೀಲ ಪರಿಚಯಿಸಿದರು. ಮುತ್ತಮ್ಮ ನಿರೂಪಿಸಿದರು. ಶೋಭಾ ವಂದಿಸಿದರು. ಎರಡನೇ ವರ್ಷದ ಪ್ರಶಿಕ್ಷಣಾರ್ಥಿಗಳು ಮಹಿಳಾ ಗೀತೆಯನ್ನು ಪ್ರಸ್ತುತ ಪಡಿಸಿದರು. ಸುಮಾರು ಎರಡು ನೂರು ಪ್ರಶಿಕ್ಷಣಾರ್ಥಿಗಳು ಭಾಗವಹಿಸಿ ಚಿಂತನಾ ಗೋಷ್ಠಿಗೆ ಮೆರುಗು ತಂದರು.

# ಪ್ರಜಾಪ್ರಭುತ್ವದಲ್ಲಿ ಮತದಾನ ಒಂದು ಶ್ರೇಷ್ಠ ಕರ್ತವ್ಯ: ರವಿ ಕಟ್ಟಿಮನಿ

**ವಿಜಯಪುರ :** ಪ್ರಜಾಪ್ರಭುತ್ವದಲ್ಲಿ ಪ್ರಜೆಗಳು ಹಲವು ಕರ್ತವ್ಯಗಳನ್ನು ನಿರ್ವಹಿಸಬೇಕಾಗುತ್ತದೆ. ಆ ಎಲ್ಲಾ ಕರ್ತವ್ಯಗಳಲ್ಲಿ ಅತಿ ಶ್ರೇಷ್ಠವಾದ ಕರ್ತವ್ಯ ಮತದಾನ. ಮತದಾನ ಎಂಬುದು ಪ್ರಜಾಪ್ರಭುತ್ವದ ಬೆನ್ನೆಲುಬು ಎಂದು ಸರ್ಕಾರಿ ವಸತಿಯುಕ್ತ ಪ್ರಥಮ ದರ್ಜೆ ಕಾಲೇಜು ಹಡಲಗೇರಿಯ ಸಹಾಯಕ ಪ್ರಾಧ್ಯಾಪಕ ಪ್ರೊ?ರ. ರವಿ ಕಟ್ಟಿಮನಿ ಹೇಳಿದರು.

ದೇವರಹಿಪ್ಪರಗಿ ಸರಕಾರಿ ಪ್ರಥಮ ದರ್ಜೆ ಕಾಲೇಜು ವತಿಯಿಂದ ಮುಳುಸಾವಳಗಿ ದತ್ತು ಗ್ರಾಮದಲ್ಲಿ ಹಮ್ಮಿಕೊಂಡಿದ್ದ ರಾಷ್ಟ್ರೀಯ ಸೇವಾ ಯೋಜನೆಯ ವಾರ್ಷಿಕ ವಿಶೇಷ ಶಿಬಿರದಲ್ಲಿ ಮಾತನಾಡಿದರು.




ಮತದಾರರು ಭ್ರಷ್ಟರಾದರೆ ಆಯ್ಕೆಯಾಗಿ ಬರುವ ಆಳುವ ವರ್ಗವು ಭ್ರಷ್ಟವಾಗಿರುತ್ತದೆ ಎಂದು ಕಾರ್ಯಕ್ರಮ ಅಧ್ಯಕ್ಷತೆ ವಹಿಸಿದ ಪ್ರೊ?ರ. ಪ್ರೇಮಕುಮಾರ ಅವರು ಹೇಳಿದರು.

ಸಂಗನಗೌಡ ಬಿರಾದಾರ, ರೇಣುಕಾ ಬಿರಾದಾರ, ಉಮೇಶ ಮೂಲಿಮನಿ, ರೇಖಾ ತಳವಾರ, ರಾಜು ಕಪಾಲಿ, ಶಿವಪುತ್ರ ಜಾಲವಾದಿ, ಮಲ್ಲಿಕಾರ್ಜುನ, ಲಕ್ಷ್ಮೀಶ,ಭೀಮನಗೌಡಬಿರಾದಾರ ಉಪಸ್ಥಿತರಿದ್ದರು.

# ಮೇಲ್ವರ್ಗದವರು ಸಂವಿಧಾನದ ಸೌಲಭ್ಯ ಬಿಟ್ಟುಕೊಡಿ: ಬಸವರಾಜ ಜಾಲವಾದಿ

**ಕೊಲ್ಹಾರ:** ಮೇಲ್ವರ್ಗಗಳು ಮೇಲುರಿಮೆಯ ಭ್ರಮೆಯಿಂದ ಹೊರಬರುವುದಾಗಬೇಕು. ಪುರಾಣ ಪುರುಷನ ಅಥವಾ ಪೌರಾಣಿಕ ಹಿನ್ನೆಲೆಯಿಂದ ಬಂದಂತಹ ಹೆಸರುಗಳನ್ನು ಹಿಂದುಳಿದ ವರ್ಗಗಳು (ಓಬಿಸಿ) ಅನುಸರಿಸಕೂಡದು. ಎಂದು ಸಾಮಾಜಿಕ ಚಿಂತಕ ಬಸವರಾಜ ಜಾಲವಾದಿ ಹೇಳಿದರು.

ತಾಲೂಕಿನ ಕೂಡಗಿಯಲ್ಲಿ ಡಾ//ಬಾಬಾ ಸಾಹೇಬ್ ಅಂಬೇಡ್ಕರ್ ಯುವಕ ಮಂಡಳಿ ಏರ್ಪಡಿಸಿದ ಡಾ. ಬಿ.ಆರ್. ಅಂಬೇಡ್ಕರ್ ಅವರ 134 ನೇ ಜಯಂತೋತ್ಸವ ಕಾರ್ಯಕ್ರಮದ ವಿಶೇಷ ಆಹ್ವಾನಿತರವಾಗಿ ಮಾತನಾಡುತ್ತಿದ್ದರು.

ಮುಂದುವರೆದು ಮಾತನಾಡುತ್ತಾ ಇತ್ತ ನಾವು ಮೇಲ್ವರ್ಗದವರೆಂಬ ಹಣೆಪಟ್ಟಿಯೂ ಬೇಕು ಬಡವರು, ದೀನರು, ದಲಿತರಿಗೆ ಹಾಗೂ ಕೆಳ ವರ್ಗದವರಿಗಾಗಿ ಇರುವ ಮೀಸಲಾತಿಯ ಸೌಲಭ್ಯವೂ ಬೇಕು ಎಂದರೆ ನಾಚಿಕೆಗೇಡಿನ ಸಂಗತಿಯಲ್ಲದೆ ಮತ್ತೇನು ಎಂದು ಪ್ರಶ್ನಿಸಿದರು.

ಸಾಮಾಜಿಕ ಸ್ಥಾನಮಾನದಲ್ಲಿ ತಾವು ಉನ್ನತ ಕುಲದವರುಎಂದುಕೊಂಡರೆಸಂವಿಧಾನದ ಸೌಲಭ್ಯಗಳನ್ನು ಬಿಟ್ಟು ಕೊಡಬೇಕು, ಅಂಬೇಡ್ಕರರಿಗೆ ಈ ಪುರಾಣ ಪುಣ್ಯಕಥೆಗಳು ತನ್ನ ಜನರನ್ನು ನಾಶಗೊಳಿಸಿದ್ದ ಇತಿಹಾಸ ಗೊತ್ತಿತ್ತು ಎಂದರು.



ನಾವು ಹಿಂದುಳಿದ ವರ್ಗದವರು ದೀನರು ಬಡವರು ಎಂದು ಹೇಳಿಕೊಂಡು ಸಂವಿಧಾನದ ಸೌಲಭ್ಯಗಳನ್ನು ಪಡೆದುಕೊಂಡ ಮೇಲೂ ಮೇಲ್ವರ್ಗ ಎಂಬ ಪಟ್ಟವೇಕೆ..!?ಸಾಮಾಜಿಕ ಸ್ಥಾನ ಮಾನದ ಪ್ರಶ್ನೆ ಬಂದಾಗ ನಾವು ಮೇಲ್ವರ್ಗ ಎಂಬ ಮೇಲುರಿಮೆ ಎಂಬ ಆ ಅಮಲೇ ದಲಿತರನ್ನು ಇನ್ನಷ್ಟು ಕುಬ್ಜರನ್ನಾಗಿಸುತ್ತಿದೆ. ಸಂವಿಧಾನದ ಸೌಲಭ್ಯಗಳ ಪ್ರಶ್ನೆ ಬಂದಾಗ ನಾವೂ ಬಡವರು, ನಾವೂ ದೀನರು,ನಾವು ಹಿಂದುಳಿದ ವರ್ಗದವರು ಹೇಳಿಕೊಂಡು ಬರುವವರು ತಮ್ಮ ಮೇಲುರಿಮೆ ಬಿಟ್ಟು ಬಿಡಬೇಕಾಗುತ್ತದೆ ಇರದಿದ್ದರೆ ಹಿಂದುಳಿದ ವರ್ಗ ಎಂಬ ಮೀಸಲಾತಿ ಸೌಲಭ್ಯವನ್ನು ಬಿಟ್ಟು ಕೊಡಬೇಕಾಗುತ್ತದೆ ಇತ್ತ ಸಾಮಾಜಿಕ ಸ್ಥಾನಮಾನವೂ ಬೇಕು ಅಂತ ಸಂವಿಧಾನದ ಸೌಲಭ್ಯಗಳು ಬೇಕು ಎಂದಾಗ ಇದನ್ನು ಪ್ರಶ್ನಿಸಲೇಬೇಕಾಗುತ್ತದೆ ಎಂದರು.

ಉಪನ್ಯಾಸ ನೀಡಿದ ಶ್ರೀಮತಿ ಮಂಜುಳಾ ಬಸವರಾಜ್

"ಕಲಿತವರ ದೋಷವೆಔದರೆ ಅತಿಯಾದ ಸ್ವಾರ್ಥಿಯಾಗಿ ಸ್ವಂತದ ಹಿತಕ್ಕೆ ಬೆನ್ನುಬಿದ್ದು ಕೇವಲ ಹೆಔಡತಿ –ಮಕ್ಕಳ ಬಗ್ಗೆಯಷ್ಟೇ ನೋಡಿಕೊಳ್ಳುತ್ತ ಸಮಾಜದ /ಸಮುದಾಯದ ಹಿತವನ್ನು ಕಡೆಗಣಿಸುವುದು ದೊಡ್ಡ ತಪ್ಪು.ಈ ಸ್ವಾರ್ಥದಲ್ಲಿ ಸಮಾಜದ ಬಗೆಗಿನ ತನ್ನ ಕರ್ತವ್ಯ ಯಾವುದು ಎಂಬ ಭಾವನೆ ಜಾಗೃತವಾಗದಿರುವುದೇ ಕಲಿತ ಓಬಿಸಿಯ ಅಥವಾ ದಲಿತ ನೌಕರನ ದೋಷವಾಗಿದೆ ಅದಕ್ಕಾಗಿ ಸಮುದಾಯದ ಕಡೆ ಮುಖ ಮಾಡಿ ಅನಿಷ್ಟಗಳನ್ನು ತೊಡೆದುಹಾಕುವಲ್ಲಿ ನೌಕರ ವರ್ಗ ಸಮಾಜದತ್ತ ಹೊರಳಬೇಕು. ಎಂದು ಹೇಳಿ

ಇಲ್ಲಿಯ ಧರ್ಮ,ಸಾಮಾಜಿಕ ರಚನೆ ಮತ್ತು ಸಂಸ್ಕೃತಿಯ ಬಗೆಗೆ ಬಾಬಾಸಾಹೇಬರು ಎಂದೋ ರೋಶಿ ಹೋಗಿದ್ದರು ಎಂಬುದನ್ನು ನೆನಪಿಸಿದರು.

ವೇದಿಕೆ ಮೇಲೆ ಜಗದೀಶ್ ಹಿರೇಮಠ. ಕೂಡಗಿ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಎ.ಎಸ್. ಕೋಟ್ಯಾಳ, ಪಂಚಾಯತ್ ಸದಸ್ಯರಾದ , ನೀಲಮ್ಮ ಮಾದರ್, ದ್ಯಾಮವ್ವ ತೋಳಮಟ್ಟಿ,ಆರೀಫ್ ತಾಳಿಕೋಟಿ,ಜಾವೀದ್ ಗಡೇದ್, ಜ್ಞಾನಭಾರತಿ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಸೋಮು ಸಾಗರ್, ಗುತ್ತಿಗೆದಾರ ಅಸ್ಲಾಂ ಕೊಳ್ಳಿ, ಇಮ್ರಾನ್, ಮಾಜಿ ಸೈನಿಕ ರಾಮಪ್ಪ ಚಲವಾದಿ ಕರವೇ ವಿದ್ಯಾರ್ಥಿ ಘಟಕದ ಜಿಲ್ಲಾ ಅಧ್ಯಕ್ಷರಾದ ಮಹೇಶ್ ಕುಮಾರ್ ಹರಿಜನ,

ಬಾಲಪ್ಪ ಚಲವಾದಿ ಹಾಜರಿದ್ದರು.

ಆರಂಭದಲ್ಲಿ ಅಂಜಲಿ ಹಾಗೂ ಶ್ವೇತಾ ಕ್ರಾಂತಿ ಗೀತೆಯ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಮಹಾಂತೇಶ್ ಪಾಟೀಲ್ ಕಾರ್ಯಕ್ರಮ ನಿರ್ವಹಿಸಿದರು.

# ಕಾಂಗ್ರೆಸ್ ಸರ್ಕಾರದ ಸಾಧನೆ ಶೂನ್ಯ: ಜಿಗಜಿಣಗಿ



**ವಿಜಯಪುರ :** ಕೇರಳ ರಾಜ್ಯದ ವೈಯನಾಡ್ ಉಪಚುನಾವಣೆ ಸಂದರ್ಭದಲ್ಲಿ ಎಐಸಿಸಿ ಧುರೀಣೆ ಪ್ರಿಯಾಂಕಾ ಗಾಂಧಿ ಅವರು ನಾಮಪತ್ರ ಸಲ್ಲಿಸುವಾಗ ಎಐಸಿಸಿ ಅಧ್ಯಕ್ಷಮಲ್ಲಿಕಾರ್ಜುನ ಖರ್ಗೆ ಅವರು ಹೊರಗಡೆ ನಿಂತು ಕಿಡಕಿಯಲ್ಲಿ ನಾಮಪತ್ರ ಸಲ್ಲಿಸುವ ಪ್ರಕ್ರಿಯೆ ವೀಕ್ಷಿಸುತ್ತಿದ್ದರು. ಇದು ಕಾಂಗ್ರೆಸ್ ಸಾಧನೆಯೇ? ದಲಿತರ ಶ್ರೇಯೋಭಿವೃದ್ಧಿಗಾಗಿ ಇರುವ ಎಸ್‌ಇಪಿ ಟಿಎಸ್‌ಪಿ ಹಣವನ್ನು ಬೇರೆ ಉದ್ದೇಶಗಳಿಗೆ ಬಳಸಿದ್ದು ಕಾಂಗ್ರೆಸ್ ಸಾಧನೆಯೇ ಎಂದು ಸಂಸದ ರಮೇಶ ಜಿಗಜಿಣಗಿ ಕಾಂಗ್ರೆಸ್ ಸರ್ಕಾರದ ವಾಗ್ದಾಳಿ ಮಾಡಿದ್ದಾರೆ.

ಕಾಂಗ್ರೆಸ್ ಸರ್ಕಾರದ ಸಾಧನಾ ಸಮಾವೇಶದ ಕುರಿತು ಪ್ರತಿಕ್ರಿಯೆ ನೀಡಿರುವ ಸಂಸದ ಜಿಗಜಿಣಗಿ ಅವರು, ಕಾಂಗ್ರೆಸ್ ಸರ್ಕಾರ ಯಾವ ಸಾಧನೆಯನ್ನೂ ಮಾಡಿಲ್ಲ, ಕೇವಲ ಜನರಿಗೆ ಮೋಸ ಮಾಡಿದೆ. ಜನರಿಗೆ ಮೋಸ ಮಾಡಿ ಅವರಿಗೆ ಬೆಲೆ ಏರಿಕೆಯ ಬಿಸಿ ಅನುಭವಿಸುವಂತೆ ಮಾಡಿದ್ದು ಮಾತ್ರ ಕಾಂಗ್ರೆಸ್ ಸಾಧನೆ. ಆದರೆ ಕಾಂಗ್ರೆಸ್ ನಾಯಕರು ಈ ಎಲ್ಲ ವಾಸ್ತವ ಸಂಗತಿಯನ್ನು ಬದಿಗಿಟ್ಟು ತಮ್ಮ ಬೆನ್ನು ತಾವೇ ಚಪ್ಪರಿಸಿಕೊಳ್ಳುವ ರೀತಿಯಲ್ಲಿ ಸರ್ಕಾರದ ಸಾಧನಾ ಸಮಾವೇಶ ಸಂಘಟಿಸುತ್ತಿರುವುದು ನಾಚಿಕೆಗೇಡಿನ ಸಂಗತಿ ಎಂದು ಜಿಗಜಿಣಗಿ ಅವರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಹಾಲು ಸೇರಿದಂತೆ ಮೊದಲಾದ ವಸ್ತುಗಳ ಬೆಲೆ ಏರಿಕೆ ಮಾಡಿ ಜನಸಾಮಾನ್ಯರ ಜೇಬಿಗೆ ಕಾಂಗ್ರೆಸ್ ಕತ್ತರಿ ಹಾಕಿದೆ. ಪರಿಶಿಷ್ಟ ಪಂಗಡಗಳ ಕಲ್ಯಾಣಕ್ಕಾಗಿ ಮಹರ್ಷಿ ವಾಲ್ಮೀಕಿ ನಿಗಮದ ಹಣವನ್ನು ಬಳಸಬೇಕಾದ ಸರ್ಕಾರ ಅದನ್ನು ತೆಲಂಗಾಣ ಚುನಾವಣೆಗೆ ಬಳಸಿಕೊಂಡಿದ್ದು ರಾಜ್ಯ ಕಾಂಗ್ರೆಸ್ ಸರ್ಕಾರದ ಸಾಧನೆಯೇ? ಎಂದು ಅವರು ಪ್ರಶ್ನಿಸಿದ್ದಾರೆ.

ನನ್ನ ಇಡೀ ರಾಜಕೀಯ ಜೀವನದಲ್ಲಿ ಇಂತಹ ಕೆಟ್ಟ ಆಡಳಿತ ವ್ಯವಸ್ಥೆಯನ್ನು ನಾನು ನೋಡಿಲ್ಲ, ಸಾಧನೆಯನ್ನು ದೀಪ ಹಚ್ಚಿ ಹುಡುಕಿದರೂ ಸಿಗುತ್ತಿಲ್ಲ, ರಾಜ್ಯ ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ಜನರು ವೇದನೆ ಅನುಭವಿಸುತ್ತಿದ್ದಾರೆ ಹೊರತು ಸರ್ಕಾರದ ಸಾಧನೆಯಂತೂ ದೂರದ ಮಾತು.

ಒಟ್ಟಾರೆ ಈ ಸರ್ಕಾರ ಜನರಿಗೆ ನಿತ್ಯ ಮೋಸ ಮಾಡುತ್ತಿದೆ, ನಿತ್ಯ ಒಂದೊಂದು ಸಮಸ್ಯೆಯ ಬರೆ ಎಳೆಯುತ್ತಿದೆ ಎಂದು ಜಿಗಜಿಣಗಿ ಅವರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

# ಮಕ್ಕಳ ಜ್ಞಾನ ಮತ್ತು ಸರ್ವಾಂಗೀಣ ವ್ಯಕ್ತಿತ್ವ ವಿಕಸನಕ್ಕೆ ಬೇಸಿಗೆ ಶಿಬಿರಗಳು ಸಹಕಾರಿ: ರಿಷಿ ಆನಂದ



**ವಿಜಯಪುರ :** ಮಕ್ಕಳ ಜ್ಞಾನ ಮತ್ತು ಸರ್ವಾಂಗೀಣ ವ್ಯಕ್ತಿತ್ವ ವಿಕಸನಕ್ಕೆ ಪೂರಕವಾಗಿ ಬೇಸಿಗೆ ಶಿಬಿರಗಳು ಸಹಾಕಾರಿಯಾಗಿವೆ ಎಂದು ಜಿಲ್ಲಾ ಬಾಲ ಭವನ ಅಧ್ಯಕ್ಷ ಹಾಗೂ ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಿಷಿ ಆನಂದ ಅವರು ಹೇಳಿದರು.

ನಗರದ ಜಿಲ್ಲಾ ಪಂಚಾಯತಿಯ ರಸ್ತೆಯಲ್ಲಿರುವ ಗಾಂಧಿ ಭವನದಲ್ಲಿ ಜಿಲ್ಲಾ ಬಾಲಭವನ ಸಮಿತಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರ ಸಹಯೋಗದಲ್ಲಿ ಮಂಗಳವಾರ ನಡೆದ ಮಕ್ಕಳ ಬೇಸಿಗೆ ಶಿಬಿರ ಸಮಾರೋಪ ಸಮಾರಂಭಕ್ಕೆ ಚಾಲನೆ ನೀಡಿ ಮಾತನಾಡಿದರು.

ಬೇಸಿಗೆ ಶಿಬಿರವು ಬಹಳ ತೃಪ್ತಿದಾಯಕವಾಗಿ ಜರುಗಿದ್ದು, ಅತ್ಯಲ್ಪ ಸಮಯದಲ್ಲಿಯೇ ಶಿಬಿರದಲ್ಲಿ ಭಾಗವಹಿಸಿದ ಮಕ್ಕಳು ಕರಾಟೆ, ನೃತ್ಯ, ಸಂಗೀತ, ಚಿತ್ರಕಲೆ, ಕರಕುಶಲ ವಸ್ತುಗಳ ತಯಾರಿಕೆ ಸೇರಿದಂತೆ ಅಗತ್ಯ ಕೌಶಲ್ಯಗಳನ್ನು ತಿಳಿದುಕೊಂಡಿದ್ದಾರೆ. ನಾಲ್ಕು ಗೋಡೆಗಳ ಮಧ್ಯ ಸದಾ ಪುಸ್ತಕ, ಓದು-ಬರಹ ಒತ್ತಡದಿಂದ ಮುಕ್ತರಾಗಿ ಮಕ್ಕಳು ತಮ್ಮ ಸ್ನೇಹಿತರೊಂದಿಗೆ ಆಟವಾಡಿಕೊಂಡು ಸಂತೋಷದಿಂದ ಮುಕ್ತವಾದ ವಾತಾವರಣದಲ್ಲಿ ಕಲಿಕೆಯಲು ಬೇಸಿಗೆ ಶಿಬಿರವು ಸಹಕಾರಿಯಾಗಿದೆ. ಮಕ್ಕಳಲ್ಲಿ ಅಡಗಿರುವ ಪ್ರತಿಭೆಗೆ ಪ್ರೋತ್ಸಾಹ ನೀಡಿ, ಪ್ರತಿಭೆ ಅನಾವರಣಕ್ಕೆ ಈ ಶಿಬಿರ ವೇದಿಕೆಯಾಗಿದೆ. ಮಕ್ಕಳ ಮನಸ್ಸು ಹೂವಿನಂತೆ ಅರಳಲು ಬೇಸಿಗೆ ಶಿಬಿರವು ನೆರವಾಗಲಿದೆ. ಈ ಶಿಬಿರದಲ್ಲಿ ಮಕ್ಕಳಿಗೆ ಸಂಪನ್ಮೂಲ ವ್ಯಕ್ತಿಗಳು ನೀಡುವ ಸಲಹೆ ಹಾಗೂ ಸೂಕ್ತ ಮಾರ್ಗದರ್ಶನವು ಮಕ್ಕಳು ಕಲಿಕೆಯತ್ತ ಆಸಕ್ತಿ ತಾಳಿ ಅವರಲ್ಲಿನ ಸೃಜನಾತ್ಮಕ ಕಲೆಯ ರೂಢಿಸಿಕೊಳ್ಳಲು ಶಿಬಿರದ ಉಪಯುಕ್ತತೆ ಸಾಕಾರಗೊಳ್ಳುತ್ತದೆ. ಮಕ್ಕಳು ಹೊಸ-ಹೊಸ ವಿಷಯಗಳನ್ನು ಕಲಿಯುವುದರಿಂದ ಅವರ ಕಲಿಕಾ ಕಾರ್ಯಕ್ಷಮತೆ ದ್ವಿಗುಣವಾಗುವುದಷ್ಟೇ ಅಲ್ಲದೇ ಆತ್ಮವಿಶ್ವಾಸದ ದೃಢತೆ ಹೆಚ್ಚಾಗುತ್ತದೆ. ನುರಿತ ಸಂಪನ್ಮೂಲ ವ್ಯಕ್ತಿಗಳನ್ನು ಬಳಸಿಕೊಂಡು ಮಕ್ಕಳಲ್ಲಿ ಓದುವ ಹವ್ಯಾಸ ರೂಢಿಸುವುದು, ನೈತಿಕತೆ, ನಾಯಕತ್ವ ಗುಣ, ವಿಜ್ಞಾನ, ಗಣಿತ ಚಟುವಟಿಕೆ, ಕರಾಟೆ, ನೃತ್ಯ, ಸಂಗೀತ, ಚಿತ್ರಕಲೆ, ಕರಕುಶಲ ವಸ್ತುಗಳ ತಯಾರಿಕೆ ಕೌಶಲ್ಯ ಹಾಗೂ ಇನ್ನಿತರ ಆಸಕ್ತಿದಾಯಕ ಚಟುವಟಿಕೆಗಳೂ ಸೇರಿದಂತೆ ಹಲ ಉಪಯುಕ್ತ ವಿಷಯಗಳನ್ನು ಶಿಬಿರದಲ್ಲಿ ಕಲಿಸಿಕೊಡಲಾಗಿದೆ.

ಮುಂಬರುವ ದಿನಗಳಲ್ಲಿ ಬಾಲ ಭವನದ ಹೊರಾಂಗಣ ಆವರಣವನ್ನು ನವೀಕರಣಗೊಳಿಸಿ ಮಕ್ಕಳ ಸ್ನೇಹಿ ಉದ್ಯಾನವನವನ್ನಾಗಿ ಮಾಡಲಾಗುವುದು. ಈ ಶಿಬಿರವನ್ನು ಬೇಸಿಗೆಗೆ ಮಾತ್ರ ಸೀಮಿತಗೊಳಿಸದೇ ವರ್ಷವಿಡೀ ಮಕ್ಕಳ ಸರ್ವತೋಮುಖ ವ್ಯಕ್ತಿತ್ವದ ಬೆಳವಣಿಗೆಗಾಗಿ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು. ಪಾಠದೊಂದಿಗೆ ಆಟ ಎಂಬುದರೆಡೆಗೆ ಪಾಲಕರು ಒತ್ತು ನೀಡಬೇಕು. ಮಕ್ಕಳು ಹೊಂದಿರುವ ಅವರ ಆಸಕ್ತಿ ಕ್ಷೇತ್ರ ಮತ್ತು ವಿವಿಧ ಚಟುವಟಿಕೆಗಳಲ್ಲಿಯೂ ಭಾಗವಹಿಸುವಂತೆ ಪ್ರೋ?ರೀತ್ಸಾಹ ನೀಡಿ ಅವರಲ್ಲಿನ ಸೃಜನಾತ್ಮಕ ಪ್ರತಿಭೆಯ ಅನಾವರಣಕ್ಕೆ ಪ್ರೋತ್ಸಾಹಿಸಬೇಕು ಎಂದು ಹೇಳಿದರು. ಈ ಸಂದರ್ಭದಲ್ಲಿ, ಜಿಲ್ಲಾ ಬಾಲಭವನದ ಕಾರ್ಯದರ್ಶಿಗಳು ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕ ಕೆ.ಕೆ.ಚವ್ಹಾಣ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಅಧಿಕಾರಿ ದೀಪಾ ಕಾಳೆ, ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ದೀಪಾಕ್ಷಿ ಜಾನಕಿ, ಗ್ರಾಮೀಣ ಶಿಶು ಅಭಿವೃದ್ಧಿ ಯೋಜನಾಧಿಕಾರಿ ಅನೀಲ್ ಹಳ್ಳಿ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಸಂಪನ್ಮೂಲ ವ್ಯಕ್ತಿಗಳಾದ ಭಾರತಿ ಕುಂದನಗಾರ, ಸವಿತಾ ಬಿರಾದಾರ, ಜಗದೀಶ ಗುಳೇದಗುಡ್ಡ, ವಾಸು ಕುಲಕರ್ಣಿ, ಸುಮೀತ ಅಕ್ಕಿ ಸೇರಿದಂತೆ ಜಿಲ್ಲಾ ಬಾಲ ಭವನ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಎಲ್ಲ ಅಧಿಕಾರಿ, ಸಿಬ್ಬಂದಿ ಉಪಸ್ಥಿತರಿದ್ದರು.

# ಒಳಮೀಸಲಾತಿ ಸಮೀಕ್ಷೆಯಲ್ಲಿ ಶಿಳ್ಳೆಕ್ಯಾತ ನಮೂದಿಸಲು ಕಾಟಕರ ಆಗ್ರಹ

**ಆಲಮೇಲ :** ಗೌರವಾನ್ವಿತ ನ್ಯಾಯಮೂರ್ತಿ ಡಾ. ನಾಗಮೋಹನದಾಸ ಏಕ ಸದಸ್ಯ ಆಯೋಗವು ರಾಜ್ಯದಲ್ಲಿರುವ ಪರಿಶಿಷ್ಟ ಜಾತಿಯ, ಉಪಜಾತಿಗೆ ಅನುಗುಣವಾಗಿ ಮೀಸಲಾತಿ ಹಂಚಿಕೆ ಸೌಲಭ್ಯಕ್ಕಾಗಿ ಜಾತಿ ಸಮೀಕ್ಷೆಯು ನಡೆಯುತ್ತಿದ್ದು, ಪರಿಶಿಷ್ಟ ಜಾತಿಯ 101 ಜಾತಿಯ ಸಮುದಾಯದರು ತಮ್ಮ ನಿಖರವಾದ ದತ್ತಾಂಶವನ್ನು ನೀಡಲು ಕರ್ನಾಟಕ ರಾಜ್ಯ ಕಟಬು ಕಟಬರ ವಿಜಯಪುರ ಜಿಲ್ಲಾ ಅಧ್ಯಕ್ಷರಾದ ಶಿವಮೂರ್ತಿ ಕಾಟಕರ ರವರು ಆಗ್ರಹಿಸಿದ್ದಾರೆ

ಪರಿಶಿಷ್ಟ ಜಾತಿಯ ಸಮುದಾಯದಲ್ಲಿ ರಾಜ್ಯದಲ್ಲಿ 101 ಸಮುದಾಯಗಳು ಒಳಗೊಂಡಿದೆ ಅವುಗಳಲ್ಲಿ ಅತ್ಯಂತ ಹಿಂದುಳಿದ ನಿರ್ಲಕ್ಷಿತ ಅಲೆಮಾರಿ ಸಮುದಾಯದ ಸೂಕ್ಷ್ಮ ಸಮುದಾಯಗಳಿದ್ದು ಪ್ರಮುಖವಾಗಿ ತಮ್ಮ ಪಾರಂಪರಿಕ ವೃತ್ತಿ ಸೂಚಕವಾಗಿ ಕರೆಯಲ್ಪಡುವ ಶಿಳ್ಳೆ ಖ್ಯಾತಸ ಸಮುದಾಯವು ಒಂದಾಗಿದೆ ಇವರು ತೊಗಲು ಗೊಂಬೆಯಾಟ ಒಳನಾಡಿನ ನದಿ,ಹಳ್ಳ, ಕೆರೆ ಕಟ್ಟೆಗಳಲ್ಲಿ ಮೀನು ಹಿಡಿಯುವ, ಹೆಂಗಸರು ಹೆಜ್ಜೆ ಹಾಕುವ, ಬಿಕ್ಷಾಟನೆ ಅಂತಹ ವೃತ್ತಿಗಳಿಂದ ಬದುಕುತ್ತಿವೆ

ಇಂತಹ ಸಿಳ್ಳೆಕ್ಯಾತಸ ಸಮುದಾಯಕ್ಕೆ ಪ್ರಾದೇಶಿಕವಾಗಿ ಕೀಲ್ಲಿಕೇತರ ,ಕಟಬು ಕಟಬರ ,ಬುಂಡೆ ಬೇಸ್ತ ಅಂತ ಗುರುತಿಸಲಾಗುತ್ತವೆ ಜಾತಿಗಣತಿಯ ಸಮೀಕ್ಷೆ ಪ್ರಾರಂಭವಾಗಿರುವುದರಿಂದ ಅಲೆಮಾರಿ ಸೂಕ್ಷ್ಮ ಸಮುದಾಯದ

ಶಿಳ್ಳೆಕ್ಯಾತಸ ಕ್ರಮ ಸಂಖ್ಯೆ 096 ರಲ್ಲಿ ಬರುವ ಉಪ ಜಾತಿಗಳ ಕಟಬು ಕಟಬರರು ಜಾತಿ ಕಾಲಂನಲ್ಲಿ ಶಿಳ್ಳೆಕ್ಯಾತಾಸ ಅಂತಾ ನಮೋದಿಸಲು ಆಗ್ರಹಿಸಲಾಗಿದೆ

ಸಮೀಕ್ಷೆಗೆ ವಸ್ತು ನಿಸ್ಟವಾದ ಮಾಹಿತಿ ನೀಡಿ 'ಶಿಳ್ಳೆಕ್ಯಾತಾಸ' ಸಮುದಾಯ ಹಾಗೂ ಉಪ ಜಾತಿಗಳಿಗೆ ಆದ ಅನ್ಯಾಯದ ದತ್ತಾಂಶವನ್ನು ಒದಗಿಸಲು ವಿಜಯಪುರ ಜಿಲ್ಲಾಧ್ಯಕ್ಷ ಶಿವಮೂರ್ತಿ ಕಾಟಕರ (ದೇವಣಗಾಂವ) ಅವರು ಪತ್ರಿಕ ಹೇಳಿಕೆಯ ಮೂಲಕ ವಿನಂತಿಸಿದ್ದಾರೆ.

# ಸುಹಾಸ್ ಶೆಟ್ಟಿ ಕುಟುಂಬಕ್ಕೆ ರೂ.5 ಲಕ್ಷ ಚೆಕ್ ವಿತರಣೆ

**ವಿಜಯಪುರ :** ಸದಾ ಹಿಂದುತ್ವ, ಹಿಂದೂಗಳ ಪರವಾಗಿ ಗಟ್ಟಿಯಾಗಿ ನಿಲ್ಲುವ ಶಾಸಕರಾದ ಬಸನಗೌಡ ಪಾಟೀಲ ಯತ್ನಾಳ ಅವರು, ಈಚೆಗೆ ಮಂಗಳೂರಿನಲ್ಲಿ ಹತ್ಯೆಯಾದ ಹಿಂದೂ ಕಾರ್ಯಕರ್ತ ಸುಹಾಸ್ ಶೆಟ್ಟಿ ಅವರ ಅಂತ್ಯಕ್ರಿಯೆಯಲ್ಲಿ ಭಾಗವಹಿಸಿ, ಕುಟುಂಬದವರಿಗೆ ಸಾಂತ್ವನ ಹೇಳಿ, ವೈಯಕ್ತಿಕವಾಗಿ ರೂ.5 ಲಕ್ಷ ಸಹಾಯ ಧನ ನೀಡುವುದಾಗಿ ಘೋಷಿಸಿದಂತೆ, ಮಂಗಳವಾರ ತಮ್ಮ ಆಪ್ತ ಸಹಾಯಕರ ಮೂಲಕ ಸಹಾಯಧನ ಚೆಕ್ ನ್ನು ನೀಡಿದರು.

ಬಂಟ್ವಾಳ ತಾಲ್ಲೂಕಿನ ಕಾರಿಂಜ ಗ್ರಾಮದಲ್ಲಿರುವ ತೋಟದ ಮನೆಗೆ ಭೇಟಿ ನೀಡಿ, ಸುಹಾಸ್ ಶೆಟ್ಟಿ ಅವರ ತಂದೆ-ತಾಯಿ ಅವರಿಗೆ ಸಾಂತ್ವನ ಹೇಳಿ ಚೆಕ್ ಹಸ್ತಾಂತರಿಸಿದರು.

ಈ ಸಂದರ್ಭದಲ್ಲಿ ಶಾಸಕರ ಆಪ್ತ ಸಹಾಯಕರಾದ ಪಿ.ಜಿ.ಕೆಂಗನಾಳ, ಉಮೇಶ ಕೋರೆ, ಯಲಗೊಂಡ ಬಾಗಾದಿ, ಮುಖಂಡರಾದ ದಾದಾಸಾಹೇಬ ಬಾಗಾಯತ, ಸಚಿನ ಕೋರಿ ಸೇರಿದಂತೆ ಸ್ಥಳೀಯ ಹಿಂದೂ ಮುಖಂಡರು, ಕಾರ್ಯಕರ್ತರು ಉಪಸ್ಥಿತರಿದ್ದರು.



# ಅಂತರರಾಷ್ಟ್ರೀಯ ಮಿಡವೈವ್ಸ್ ಡೇ-2025




**ಬಾಗಲಕೋಟೆ :** ಪ್ರತಿಷ್ಠಿತ ಬ.ವಿ.ವ ಸಂಘದ ಸಜ್ಜಲಶ್ರೀ ನರ್ಸಿಂಗ್ ವಿಜ್ಞಾನ ಮಹಾವಿದ್ಯಾಲಯದ ಪ್ರಸವ ಮತ್ತು ಸ್ತ್ರೀರೋಗ ಶಾಸ್ತ್ರ ಶುಶ್ರೂಷಾ ವಿಭಾಗದ ವತಿಯಿಂದ ಮಂಗಳವಾರದಂದು ಅಂತರಾಷ್ಟ್ರೀಯ ಮಿಡ್‌ವೈವ್ಸ್ ಡೇ ಅಂಗವಾಗಿ "ಮಿಡವೈವ್ಸ್: ಕ್ರಿಟಿಕಲ್ ಇನ್ ಎವರಿ ಕ್ರೈಸಿಸ್ "ಎಂಬ ಶೀರ್ಷಿಕೆಯೊಂದಿಗೆ ಹಾನಗಲ್ ಶ್ರೀ ಕುಮಾರೇಶ್ವರ ಆಸ್ಪತ್ರೆ ಹಾಗೂ ಸಂಶೋಧನಾ ಕೇಂದ್ರ, ಬಾಗಲಕೋಟೆಯ ಓಬಿಜಿ ಒಳರೋಗಿಗಳ ವಿಭಾಗದಲ್ಲಿ ಅರ್ಥಪೂರ್ಣವಾಗಿ ಆಚರಿಸಲಾಯಿತು.

ಸಜ್ಜಲಶ್ರೀ ನರ್ಸಿಂಗ್ ವಿಜ್ಞಾನಗಳ ಮಹಾವಿದ್ಯಾಲಯದ ಪ್ರಾಚಾರ್ಯರಾದ ಡಾ|| ದೀಲಿಪ್ ಎಸ್. ನಾಟೇಕಾರ, ಅವರು ಕಾರ್ಯಕ್ರಮ ಅಧ್ಯಕ್ಷತೆ ವಹಿಸಿ ಮಾತನಾಡಿ ಮಿಡವೈವ್ಸ್ ಅವರು ಪ್ರಮುಖ ಸಿಬ್ಬಂದಿಯಾಗಿದ್ದು, ಶಿಶುಗಳ ಸುರಕ್ಷಿತ ಜನನ ಮತ್ತು ಗರ್ಭಿಣಿಯರ ಆರೋಗ್ಯದ ನಿಟ್ಟಿನಲ್ಲಿ ಶುಶ್ರೂಷಕಿಯರ ಪಾತ್ರ ಅತ್ಯಂತ ಮಹತ್ವದ್ದಾಗಿದ್ದು ಎಂದರು.

ಪ್ರಸವ ಹಾಗೂ ಸ್ತ್ರೀರೋಗ ವಿಭಾಗದ ಮುಖ್ಯಸ್ಥರಾದ ಡಾ|| ಜಯಶ್ರೀ ಅವರಸಂಗ ಗರ್ಭಿಣಿಯರ ಆರೈಕೆ, ಪ್ರಸವದ ಸಮಯ, ಜನನ ಪೂರ್ವ ಹಾಗೂ ಜನನದ ನಂತರದ ಪ್ರತಿ ಹಂತದಲ್ಲಿಯೂ ಶುಶ್ರೂಷಕಿಯರು ಮುಂದಾಳತ್ವ ವಹಿಸಿ ಆರೋಗ್ಯ ಕ್ಷೇತ್ರಕ್ಕೆ ತಮ್ಮದೇ ಆದ ಕೊಡುಗೆಯನ್ನು ಶುಶ್ರೂಷಕಿಯರು ನೀಡಿದ್ದಾರೆ ಎಂದರು.

ಅತಿಥಿಯಾಗಿ ಹಾನಗಲ್ ಶ್ರೀ ಕುಮಾರೇಶ್ವರ ಆಸ್ಪತ್ರೆ ಹಾಗೂ ಸಂಶೋಧನಾ ಕೇಂದ್ರ ಬಾಗಲಕೋಟೆಯ ನರ್ಸಿಂಗ್ ಅಧೀಕ್ಷಕರಾದ ಹೇಮಲತಾ ಹಾಗೂ ಸುನಂದಾ ಮಾತನಾಡಿದರು. ಅಲ್ಲದೇ ಇನ್ನೂಳಿದ ಶುಶ್ರೂಷಕಿಯರಾದ ಶ್ರೀಮತಿ. ರೇಣುಕಾ, ಉಮಾ, ಸಾವಿತ್ರಿ ಹಾಗೂ ಸುನಿತಾ ಅವರು ಮಾತನಾಡಿದರು. ಸಜ್ಜಲಶ್ರೀ ನರ್ಸಿಂಗ್ ವಿಜ್ಞಾನ ಮಹಾವಿದ್ಯಾಲಯದ ಪ್ರಸವ ಮತ್ತು ಸ್ತ್ರೀರೋಗ ಶಾಸ್ತ್ರ ಶುಶ್ರೂಷಾ ವಿಭಾಗದ ಉಪನ್ಯಾಸಕರುಗಳಾದ ಕುಮಾರಿ. ಪ್ರಿಯಾಂಕಾ ಜೆ, ಕುಮಾರಿ. ಆರತಿ, ಕುಮಾರಿ. ಪೂಜಾ ಎಂ. ಹಾಗೂ ಕುಮಾರಿ. ಸುಧಾ ಹಾಗೂ ಕುಮಾರಿ. ಸಹನಾ ಸೇರಿದಂತೆ ಅನೇಕರು ಭಾಗವಹಿಸಿದರು. ಎಂ.ಎಸ್ಸಿ ನರ್ಸಿಂಗ್ ಪ್ರಥಮ ವರ್ಷದ ವಿದ್ಯಾರ್ಥಿನಿಯಾದ ಕುಮಾರಿ. ಶಾಂತಾ ಸ್ವಾಗತ ಕೋರಿ ಕಾರ್ಯಕ್ರಮದ ನಿರೂಪಣೆಯನ್ನು ವಹಿಸಿದ್ದರು.

ಎಂ.ಎಸ್ಸಿ. ಅಂತಿಮ ವರ್ಷದ ವಿದ್ಯಾರ್ಥಿನಿಯಾದ ಕುಮಾರಿ. ಸಿಂಡ್ರೆಲಾ ಇವರು ಕಾರ್ಯಕ್ರಮದ ಶೀರ್ಷಿಕೆ ಕುರಿತು ಮಾತನಾಡಿದರು ಹಾಗೂ ಈ ಕಾರ್ಯಕ್ರಮದ ವಂದನಾರ್ಪಣೆ ಘಟ್ಟವನ್ನು ಕುಮಾರಿ. ಗೀತಾ ಇವರು ನಡೆಸಿ ಕೊಟ್ಟರು. ಈ ಕಾರ್ಯಕ್ರಮದಲ್ಲಿ ಎಂ.ಎಸ್ಸಿ. ನರ್ಸಿಂಗ್ ವಿದ್ಯಾರ್ಥಿಗಳು ಭಾಗವಹಿಸಿ, ಕಾರ್ಯಕ್ರಮದ ಸದುಪಯೋಗ ಪಡೆದುಕೊಂಡರು.

# ಈಶ್ವರಗೌಡ್ರು ಅವರನ್ನು ರಾಜ್ಯ ಸಮಿತಿಗೆ ಸೇರಿಸುವಂತೆ ಬಿಜೆಪಿ ಕಾರ್ಯಕರ್ತರು ಆಗ್ರಹ



**ಕೊಟ್ಟೂರು :** ಕೊಟ್ಟೂರು ತಾಲ್ಲೂಕು ಹಾಗೂ ಸುತ್ತಮುತ್ತಲಿನ ಬಿ.ಜೆ.ಪಿ. ಪದಾಧಿಕಾರಿಗಳು, ಮುಖಂಡರು, ಕಾರ್ಯಕರ್ತರು ಜಿಲ್ಲಾಧ್ಯಕ್ಷರಿಗೆ ಮನವಿ ಸಲ್ಲಿಸಲಾಯಿತು.

ಶ್ರೀಯುತ ಕೆ.ಎಸ್. ಈಶ್ವರಗೌಡ್ರು ನಮ್ಮೆಲ್ಲರ ನೆಚ್ಚಿನ ನಾಯಕರಾಗಿ ಸದಾ ಕಾರ್ಯಕರ್ತರಿಗೆ ಸ್ಪಂದಿಸುತ್ತ ಕೊಟ್ಟೂರು ಹಾಗೂ ಸುತ್ತಮುತ್ತಲಿನ ಹಳ್ಳಿಗಳಲ್ಲಿ 4 ದಶಕಗಳಿಂದ ಬಿ.ಜೆ.ಪಿ. ಸಂಘಟನೆಯಲ್ಲಿ ತೊಡಗಿಸಿಕೊಂಡಿದ್ದು. ತಮ್ಮ 10ನೇ ವಯಸ್ಸಿನಲ್ಲಿ ಆರ್.ಎಸ್.ಎಸ್. ಗೆ ಪಾದಾರ್ಪಣೆ ಮಾಡಿ ಅನೇಕ ಆರ್.ಎಸ್.ಎಸ್. ನ ಸಂಘ ಚಟುವಟಿಕೆಗಳಲ್ಲಿ ಭಾಗಿಯಾದವರು.

ಶ್ರೀಗೋಮಧುಸೂದನ್ ಆರ್.ಎಸ್.ಎಸ್.ಸಂಚಾಲಕ ಇವರು ಹುಬಳ್ಳಿಯಲ್ಲಿ ಸುಮಾರು 40 ವರ್ಷಗಳ ಹಿಂದೆ ಆಯೋಜಿಸಿದ್ದ ಸಭೆಯಲ್ಲಿ ಭಾಗಿಯಾಗಿ ತುರ್ತುಪರಿಸ್ಥಿತಿ ವಿರೋಧಿಸಿ ಧರಣಿ ಸತ್ಯಾಗ್ರಹಗಳಲ್ಲಿ ಪಾಲ್ಗೊಂಡಿದ್ದು. ಅಂದಿನಿಂದ ಇಂದಿನವರೆಗೂ ಬಿ.ಜೆ.ಪಿ. ಗೆ ನಿಷ್ಟಾವಂತರಾಗಿರುತ್ತಾರೆ. ಫ್ಯಾಕಲ್ಟಿ ಮೆಂಬರ್ ಮತ್ತು ಚಾಟರ್ಡ್ ಎಂಜಿನಿಯರ್ ಪ್ರಧಾನ ಮಾಡಲಾಗಿದೆ.

ವೃತ್ತಿಯಿಂದ ಚಾಟರ್ಡ್ ಇಂಜಿನಿಯರ್, ವ್ಯಾಲುವರ್ ಮತ್ತು ಟಿ.ಎ.ಪಿ.ಸಿ.ಎಂ.ಎಸ್. ತಾಲ್ಲೂಕು ಕೃಷಿ ಉತ್ಪನ್ನ ಮಾರಾಟ ಸಹಕಾರ ಸಂಘ ನಿ, ಕೊಟ್ಟೂರು ಇದರ ಹಾಲಿ ಅಧ್ಯಕ್ಷರು (ಸಂಸ್ಥಾಪಕ ಅಧ್ಯಕ್ಷರು) ಹಾಗೂ ತಾಲ್ಲೂಕು ಹೋರಾಟ, ರೈಲ್ವೇ ಹೋರಾಟ, ಕೆರೆ ನೀರು ತುಂಬಿಸುವ ಜನಪರ ಹೋರಾಟಗಳಲ್ಲಿ ಮುಂಚೂಣಿ ನಾಯಕತ್ವವನ್ನು ಹೊಂದಿರುತ್ತಾರೆ.

ಸ್ವಾತಂತ್ರ್ಯ ಹೋರಾಟಗಾರರ ಕುಟುಂಬದಲ್ಲಿ ಜನಿಸಿರುತ್ತಾರೆ.

ಹಾಲಿ ಕೊಟ್ಟೂರು. ಬಿ.ಜೆ.ಪಿ. ಪಟ್ಟಣ ಪಂಚಾಯ್ತಿ ಸದಸ್ಯರಾಗಿ ಸದಾ ಪಕ್ಷ ನಿಷ್ಠರಾಗಿ ದುಡಿಯುತ್ತಿರುವ ಇವರ ತನು ಮನ ಧನ ಸಹಾಯದಿಂದ ಪಕ್ಷವನ್ನು ಕಟ್ಟುತ್ತಿರುವ ಹಾಲಿ ವಿಜಯನಗರ ಜಿಲ್ಲಾ ಕಾರ್ಯಕಾರಿಣಿ ಸಮಿತಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದು. ತಮ್ಮಲ್ಲಿ ನಾವೆಲ್ಲ ಕೇಳಿಕೊಳ್ಳುವುದೇನೆಂದರೆ ಶ್ರೀಯುತ ಈಶ್ವರಗೌಡ್ರನ್ನು ರಾಜ್ಯ ಸಮಿತಿಯಲ್ಲಿ ಸೇರಿಸಿದರೆ [ಅವಕಾಶ ಮಾಡಿಕೊಟ್ಟರೆ] ಅವರಿಗೆ ಮತ್ತಷ್ಟು ಬಲ ಕೊಡುವುದರಿಂದ ಈ ಭಾಗದಲ್ಲಿ ದೊಡ್ಡ ಮಟ್ಟದಲ್ಲಿ ಪಕ್ಷ ಸಂಘಟನೆಯಾಗುತ್ತದೆ ಎಂದು ಮನವರಿಕೆ ಮಾಡಿಕೊಡುತ್ತಿದ್ದೇವೆ.ಎಂದರು

ಈ ಸಂದರ್ಭದಲ್ಲಿ ಜಿಲ್ಯಾಧಕ್ಷರು

ಸಂಜೀವ್ ರೆಡ್ಡಿ ,ಮಲ್ಲಿಕಾರ್ಜುನ ಯುವ ಘಟಕ ಅಧ್ಯಕ್ಷರು ಕೊಟ್ಟೂರು ಮಹಾಶಕ್ತಿ ಕೇಂದ್ರ ,ವಿಶ್ವನಾಥ್, ಉಪಾಧ್ಯಕ್ಷರು ಕೊಟ್ಟೂರು ಮಹಾಶಕ್ತಿ ಕೇಂದ್ರ ,ಮಂಜುನಾಥ್ ಭಜಂತ್ರಿ ಹಗರಿಬೊಮ್ಮನಹಳ್ಳಿ ಮಂಡಲ ಕಾರ್ಯದರ್ಶಿ ,ಚಂದ್ರು ಜಂಬೂರ್ ಪ್ರಧಾನ ಕಾರ್ಯದರ್ಶಿ ಕೊಟ್ಟೂರು ಮಹಾಶಕ್ತಿ ಕೇಂದ್ರ, ಅಶೋಕ್ ಉಪಾಧ್ಯಕ್ಷರು ರೈತ ಘಟಕ ಹಗರಿಬೊಮ್ಮನಹಳ್ಳಿ ಮಂಡಲ, ಬಿ.ಜೆ.ಪಿ ಎಲ್ಲಾ ಕಾರ್ಯಕರ್ತರು ಆಗ್ರಹಿಸಿದರು.

# ಹೂಡೇಂ ನಿಂದ ಶ್ರೀ ಕಂಚೋಬಳೇಶ್ವರ ಸ್ವಾಮಿಗೆ ಹೂವಿನ ಬುಟ್ಟಿ ಅರ್ಪಣೆ ದೇವಸ್ಥಾನದ ಉದ್ಘಾಟನೆ, ಕಳಸಾರೋಹಣ ಹಾಗೂ ಜಾತ್ರಾ ಮಹೋತ್ಸವ



**ಕೂಡ್ಲಿಗಿ :** ಬುಡಕಟ್ಟು ಸಂಸ್ಕೃತಿಯನ್ನು ಪ್ರತಿಬಿಂಬಿಸುವ ಶ್ರೀ ಕಂಚೋಬಳೇಶ್ವರ ಸ್ವಾಮಿಯ ನೂತನ ದೇವಸ್ಥಾನ ಉದ್ಘಾಟನೆ, ಕಳಸಾರೋಹಣ ಹಾಗೂ ಜಾತ್ರಾ ಮಹೋತ್ಸವದ ಪ್ರಯುಕ್ತ ಹೂವಿನ ಬುಟ್ಟಿಯಲ್ಲಿ ವಿವಿಧ ಬಗೆಯ ಹೂವುಗಳು ಸ್ವಾಮಿಗೆ ಅರ್ಪಿಸಲು ಹೂಡೇಂ ಗ್ರಾಮದಿಂದ ಹೂವಿನ ಬುಟ್ಟಿಯಲ್ಲಿ ವಿವಿಧ ಬಗೆಯ ಹೂವುಗಳು ಹಾಗೂ ದೇವರು ಪಟ್ಟದ ಪೂಜಾರಿ, ದಾಸರಯ್ಯನವರು, ಮಗ್ಗಿಯನ್ನು ಸ್ವಾಮಿಗೆ ಅರ್ಪಿಸಲು ಸಿಂಗಾರ ಮಾಡಿಕೊಂಡು ವಿವಿಧ ವಾದ್ಯಗಳೊಂದಿಗೆ ಸುಮಂಗಲೆಯರಿಂದ ಕಳಸ, ಕುಂಭ ದೊಂದಿಗೆ ಮೆರವಣಿಗೆ ಮೂಲಕ ಮೊಳಕಾಲ್ಮೂರು ತಾಲ್ಲೂಕಿನ ಚಿಕ್ಕೋಬನಹಳ್ಳಿ ಗ್ರಾಮಕ್ಕೆ ಶುಕ್ರವಾರ ಮಧ್ಯಾಹ್ನ ತೆರಳಿದರು. ತಾಲೂಕಿನ ಹೂಡೇಂ ಗ್ರಾಮದ ಹೂಡೇಂ ಅಜ್ಜನರು ಅಗಸರು ಬಸಜ್ಜರ ಮನೆಯಿಂದ ಶುಕ್ರವಾರ ಮಧ್ಯಾಹ್ನ ಹೂವಿನ ಬುಟ್ಟಿಯಲ್ಲಿ ವಿವಿಧ ಬಗೆಯ ಹೂವುಗಳನ್ನು ಮೆರವಣಿಗೆ ಮೂಲಕ ಚಿಕ್ಕೋಬನಹಳ್ಳಿ ಗ್ರಾಮಕ್ಕೆ ತೆರಳಿದರು. ಹೂವಿನ ಬುಟ್ಟಿ ಹೊರುವವರು ಒಂದು ದಿನ ಉಪವಾಸ ಇರುತ್ತಾರೆ. ನಂತರ ವಿವಿಧ ವಾದ್ಯ ಮೇಳದೊಂದಿಗೆ 5ಕಿ.ಮೀ. ದೂರದ ಚಿಕ್ಕೋಬನಹಳ್ಳಿ ಗ್ರಾಮದವರೆಗೆ ದಮೆರವಣಿಗೆ ಮೂಲಕ ಸಾಗಿ ನಂತರ ದೇವಸ್ಥಾನದಿಂದ ಸ್ವಾಮಿಯ ಮೂರ್ತಿಯನ್ನು ವಿವಿಧ ವಾದ್ಯ ಮೇಳದೊಂದಿಗೆ, ಚಿನ್ನಹಗರಿ ನದಿಯಲ್ಲಿ ಗಂಗೆ ಪೂಜೆಗೆ ಹೊರಡುತ್ತಾರೆ.

ಸ್ವಾಮಿಗೆ ಹೂವಿನ ಬುಟ್ಟಿಯನ್ನು ಅರ್ಪಿಸುತ್ತಾರೆ. ಶ್ರೀ ಕಂಚಿ ಓಬಳೇಶ್ವರ ಸ್ವಾಮಿಗೆ ವಿಶೇಷ ಪೂಜೆ ಹೊವಿನ ಅಲಂಕಾರ ಮಾಡಲಾಗುತ್ತದೆ. ಸ್ವಾಮಿಗೆ ಗಂಗೆ ಪೂಜೆ ನೆರವೇರಿಸಿ ನಂತರ, ಅದ್ದೂರಿಯಾಗಿ ಊರಿನ ಪ್ರಮುಖ ಬೀದಿಗಳಲ್ಲಿ ಸುಮಂಗಲೆಯರಿಂದ ಕಳಸ, ಕುಂಭ ದೊಂದಿಗೆ ಶ್ರೀ ಕಂಚೋಬಳೇಶ್ವರ ಸ್ವಾಮಿಯನ್ನು ಸಕಲವಾದ್ಯಗಳ ಕಲತಂಡಗಳೊಂದಿಗೆ ಪುರ ಪ್ರವೇಶ, ಹಾಲೆಯ ಪ್ರವೇಶ, ಗಣಪತಿ ಪೂಜೆ, ಗೋ ಪೂಜೆಯೊಂದಿಗೆ ದೇವಸ್ಥಾನದ ಉದ್ಘಾಟನೆ ಪೂಜೆ ಕಾರ್ಯಕ್ರಮಗಳು ಜರಗುವವು, ನಂತರ ಶನಿವಾರ ಬೆಳಗ್ಗೆಯಿಂದ ಲೋಕಕಲ್ಯಾಣಕ್ಕಾಗಿ ಗಣಪತಿ, ಉಮಾ ಮಹೇಶ್ವರ, ಲಕ್ಷ್ಮಿ ನಾರಾಯಣ, ಅಷ್ಟಲಕ್ಷ್ಮಿಯರು, ನವಗ್ರಹ, ವರುಣ ವಾಸ್ತು, ಮಹಾಮೃತ್ಯುಂಜಯ, ರುದ್ರಭಿಷೇಕ ಪೂಜೆ ಕಾರ್ಯಕ್ರಮಗಳು ಜರುಗಲಿವೆ, ನಂತರ ಭಾನುವಾರ ಬೆಳಿಗ್ಗೆಯಿಂದ ಬ್ರಹ್ಮ ಮುಹೂರ್ತದಲ್ಲಿ ಹೋಮ ಪೂಜೆ ಹಾಗೂ ಕಳಸಾರಣ ಕಾರ್ಯಕ್ರಮವನ್ನು ಶ್ರೀ ಪ್ರಸಂತ ಸಾಗರ ಶಿವಾಚಾರ್ಯ ಸ್ವಾಮಿಗಳು ಹಿರೇಮಠ ಇವರ ಅಮೃತ ಹಸ್ತದಿಂದ ದೇವಸ್ಥಾನದ ಕಳಸಾರೋಣ ಜರುಗುವುದು. ಅನ್ನ ಸಂತರ್ಪಣೆ, ಹರಕೆಗಳನ್ನು ಒಪ್ಪಿಸುವುದು, ವಿಶೇಷ ಪೂಜೆ ಹಾಗೂ ಮಣೇವು ಕಾರ್ಯಕ್ರಮಕ್ಕೆ ಕರಿಯ ಕಂಬಳಿಯ ಗದ್ದುಗೆ ಮೇಲೆ ಮೂರು ಅಜ್ಜನವರ ಬಾಬತ್ತಿನ ಬೆಲ್ಲವನ್ನು ಒಂಬತ್ತು ಗುಂಪಿನಲ್ಲಿ ಇಡಲಾಗುತ್ತದೆ. ಹೀಗೆ ಕಂಬಳಿ ಮೇಲಿನ ಬೆಲ್ಲದ ಸುತ್ತಲೂ ಪಟ್ಟದ ಪೂಜಾರಿಗಳು,

ದಾಸಯ್ಯನವರು ದೇವರ ಮುಂದೆ ಕುಣಿತ ಪ್ರದರ್ಶಿಸಿ ದೀವಳಿಗೆಯು ಘಂಟೆ ನಾದಗಳ ಝೇಂಕಾರ, ಶಂಖ, ಜಾಗಟೆಯ ನಾದ, ತಮಟೆ ವಾದ್ಯಗಳ ಕುಣಿತ ಭಕ್ತರ ಹರ್ಷೋದ್ಗಾರ, ಬೆಲ್ಲ ಬಾಳೆಹಣ್ಣಿನ ಸೇವೆಯು ನೋಡುಗರಿಗೆ ಸಂಸ್ಕೃತಿಯನ್ನು ಅನಾವರಣ ಮಾಡಿಸಿದಂತೆ ಕಾಣುತ್ತದೆ. ಈ ಜಾತ್ರೆಗೆ ಮೊಳಕಾಲ್ಲೂರು, ಚಳ್ಳಕೆರೆ, ಕೂಡ್ಲಿಗಿ ತಾಲೂಕಿನ ಹೂಡೇಂ ಸೇರಿದಂತೆ ಗುಡಿಕಟ್ಟೆಯ ಯಜಮಾನರು ಸಾವಿರಾರು ಭಕ್ತರು ಈ ಹಬ್ಬದಲ್ಲಿ ಪಾಲ್ಗೊಳ್ಳುತ್ತಾರೆ.

ವರದಿ ಎಚ್ ವೀರಣ್ಣ

## ಹೊಸಪೇಟೆ ಸಮೀಪದ ತುಂಗಭದ್ರಾ ಅಣೆಕಟ್ಟೆ ಬಳಿ ಮಾಕ್ ಡ್ರಿಲ್ ನಡೆಸಲಾಯಿತು

# ಕೆಎಸ್‌ಐಎಸ್‌ಎಫ್ ಅಣಕು ಕಾರ್ಯಾಚರಣೆ

**ಹೊಸಪೇಟೆ :** ಭಾರತ ಮತ್ತು ಪಾಕಿಸ್ತಾನ ನಡುವೆ ಯುದ್ಧದ ಭೀತಿ ಹಿನ್ನೆಲೆಯಲ್ಲಿ ಹೊಸಪೇಟೆ ಸಮೀಪದ ತುಂಗಭದ್ರಾ ಅಣೆಕಟ್ಟೆ ಪ್ರದೇಶ ಹಾಗೂ ಹೊಸಪೇಟೆ ರೈಲು ನಿಲ್ದಾಣಗಳಲ್ಲಿ ಶುಕ್ರವಾರ ವಿಕೋಪ ಪರಿಸ್ಥಿತಿಯನ್ನು ಎದುರಿಸುವ ಕುರಿತು ಕರ್ನಾಟಕ ರಾಜ್ಯ ಕೈಗಾರಿಕಾ ಭದ್ರತಾ ಪಡೆ (ಕೆಎಸ್‌ಐಎಸ್‌ಎಫ್) ವತಿಯಿಂದ ಅಣಕು ಕಾರ್ಯಾಚರಣೆ ನಡೆಯಿತು. ಪೊಲೀಸ್, ಅಗ್ನಿಶಾಮಕ, ಆರೋಗ್ಯ ಮತ್ತು ಇತರ ಹಲವು ಇಲಾಖೆಗಳ ಸಮನ್ವಯದೊಂದಿಗೆ ಈ ಕಾರ್ಯಾಚರಣೆ ನಡೆಯಿತು. ರೈಲು ನಿಲ್ದಾಣದಲ್ಲಿ ಶ್ವಾನದಳ ಮತ್ತು ವಿಧ್ವಂಸಕ ಕೃತ್ಯ ನಿಗ್ರಹ ದಳದಿಂದ ತಪಾಸಣೆ ನಡೆಸಲಾಯಿತು.

"SIHI KAHI" Kannada Daily Morning, Editor, Owner, Publisher, Printer by **MARUTI BASAVANTAPPA HOASAMANI** Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at **SUDIN PRINTERS**, Sector No. 33, Shop No. 38 & 40, Opp. Ambedkar Bhavan, **NAVANAGAR, BAGALKOT-587 101.** Dist : Bagalkot, Karnataka State

Designed by MKG-9535762618